ಐಕ್ಯರಂಗ

ಅಖಿಲ ಭಾರತ ಸಮರದ ಆರಂಭ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ-11 ಸಂಚಿಕೆ-4

22 ಜನವರಿ 1989

ರೂ. 1-00

ಸಿ.ಪಿ.ಐ.(ಎಂ) ರಾಜ್ಯಗಳಲ್ಲಿ ಕಾಂಗ್ರೆಯೇತರ ಜಾತ್ಯಾತೀತ ಸರ್ಕಾರಗಳ ರಚನೆಗೆ, ಕೇಂದ್ರದಲ್ಲಿ ರಾಷ್ಟ್ರೀಯರಂಗ ಸರ್ಕಾರದ ರಚನೆಗೆ ನೆರವಾಗಬಯಸುತ್ತದೆ ಎಂದು ಸಿ.ಪಿ.ಐ(ಎಂ) ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್. ನಂಬೂದರಿಪ್ಪಾಡ್ ಹೇಳಿದ್ದಾರೆ. ಅವರು ಮದ್ರಾಸಿನ ಅಣ್ಣಾ ನಗರದಲ್ಲಿ ಡಿ.ಎಂ.ಕೆ. ಪ್ರಧಾನ ಕಾರ್ಯದರ್ಶಿ ಅಂಬಳಗಂ ರವರ ಚುನಾವಣಾ ಪ್ರಚಾರ ಸಭೆಯಲ್ಲಿ ಬೃಹತ್ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಿದ್ದರು.

"ಕಾಂಗ್ರೆಸ್(ಐ)ನ್ನು ಅಧಿಕಾರದಿಂದ ಹೊರಗಿಡುವ ಭವ್ಯ ಪರಂಪರೆಯನ್ನು ಮುಂದುವರೆಸಿ ಕಾಂಗ್ರೆಸ್(ಐ) ಎ.ಐ.ಎ.ಡಿ.ಎಂ.ಕೆ.ಯ ಜಯಲಲಿತ, ಜಾನಕಿ ಗುಂಪುಗಳೊಂದಿಗೆ ಸೇರಿ ಕೂಡಾ ಸರ್ಕಾರ ರಚಿಸಲು ಅವಕಾಶವಾಗದಂತೆ ಡಿ.ಎಂ.ಕೆ.ಗೆ ಸ್ಪಷ್ಟ ಬಹುಮತ ನೀಡಿ" ಎಂದು ತಮಿಳುನಾಡಿನ ಮತದಾರರಿಗೆ ಇ.ಎಂ.ಎಸ್. ಕರೆ ನೀಡಿದರು.

ಸಿ.ಪಿ.ಐ.(ಎಂ) ರಾಷ್ಟ್ರೀಯ ರಂಗಕ್ಕೆ ಸಂಪೂರ್ಣ ಬೆಂಬಲ ಕೊಡಲು ಒಪ್ಪಿದೆ. ಜೊತೆಗೆ ಅದರ ಧೋರಣೆಗಳಲ್ಲಿನ ದೌರ್ಬಲ್ಯಗಳನ್ನು ನಿವಾರಿಸಲು ಕೂಡ, ನಾವು ಪ್ರಯತ್ನಿಸುತ್ತೇವೆ ಎಂದು ನುಡಿದ ಇ.ಎಂ.ಎಸ್. ರಾಷ್ಟ್ರೀಯರಂಗ ಮೂರು ಪ್ರಮುಖ ವಿಷಯಗಳ ಬಗ್ಗೆ ಸರಿಯಾದ ನಿಲುವು ತಳೆಯಬೇಕೆಂದರು. ಅವೇನೆಂದರೆ ಅಲಿಪ್ತ ವಿದೇಶಾಂಗನೀತಿ, ದೇಶದ ಐಕ್ಯತೆ, ಸಮಗ್ರತೆಗೆ ಬೆದರಿಕೆಯೊಡ್ಡಿರುವ ಶಕ್ತಿಗಳ ವಿರುದ್ಧ ಹೋರಾಟ ಹಾಗೂ ದುಡಿಯುವ ವರ್ಗಗಳ ಶಕ್ತಿಶಾಲಿ ಆಂದೋಲನ ಕಟ್ಟುವ ಬಗ್ಗೆ.

ಭಾರತದ ವಿದೇಶಾಂಗ ನೀತಿ ಕಾಂಗ್ರೆಸ್(ಐ) ನೀತಿಯಲ್ಲ, ಅಥವಾ ನೆಹರು ನೀತಿಯಲ್ಲ. ರಾಜೀವ್‌ಗಾಂಧಿ ಅದನ್ನು ಅನುಸರಿಸುತ್ತಿರುವುದು ಕೇವಲ ಆಕಸ್ಮಿಕ. ಭಾರತದ ವಿದೇಶಾಂಗ ನೀತಿ ಸಾಮ್ರಾಜ್ಯಶಾಹಿಗೆ ವಿರೋಧ, ಅಲಿಪ್ತತೆ ಮತ್ತು ವಿಶ್ವ ಶಾಂತಿಯ ಭದ್ರ ತಳಹದಿಯ ಮೇಲೆ ನಿಂತಿರಬೇಕು. ಇತ್ತೀ

ಪುಟ 3 ಕ್ಕೆ

ಸಿ.ಪಿ.ಐ.(ಎಂ) ರಾಜ್ಯ ಸಮಿತಿ 9ನೆಯ ಆರ್ಥಿಕ ಕಮಿಷನ್‌ಗೆ ಜನವರಿ 13ರಂದು ಒಂದು ಮನವಿ ಸಲ್ಲಿಸಿತು. ಪಕ್ಷದ ಪ್ರತಿನಿಧಿಗಳಾಗಿ ರಾಜ್ಯ ಕಾರ್ಯದರ್ಶಿ. ಪಿ. ರಾಮಚಂದ್ರರಾವ್. ಸೆಕ್ರೆಟರಿಯೇಟ್ ಸದಸ್ಯರಾದ ಕಾ. ಎಸ್. ಸೂರ್ಯನಾರಾಯಣ ರಾವ್ ಮತ್ತು

ಹಣಕಾಸು ಆಯೋಗಕ್ಕೆ
—ಒತ್ತಾಯ—

ಎನ್.ಕೆ.ಉಪಾಧ್ಯಾಯ ಮತ್ತು ಕರ್ನಾಟಕ ವಿಧಾನಸಭಾ ಸಿ.ಪಿ.ಐ.(ಎಂ) ಗುಂಪಿನ ನಾಯಕ ಕಾ. ಆರ್.ವೆಂಕಟರಾಮಯ್ಯ ಈ ಮನವಿಯನ್ನು ಸಲ್ಲಿಸಿದರು. ಮನವಿಯ ಮುಖ್ಯ ಅಂಶಗಳು ಈ ಕೆಳಗಿನಂತಿದೆ.

1. ಆರ್ಥಿಕ ಕಮೀಷನ್ ಭಾರತದ ಸಂವಿಧಾನದ ಪ್ರಕಾರ ರಚಿತವಾಗಿರುವ ಸ್ವತಂತ್ರ ಸಂಘಟನೆ. ಅಧ್ಯಕ್ಷರಿಗೆ ಸರ್ಕಾರಿ ರೆವಿನ್ಯೂ ಆದಾಯವನ್ನು ಪ್ರತಿ 5 ವರ್ಷಕೊಮ್ಮೆ ಕೇಂದ್ರ ಮತ್ತು ರಾಜ್ಯಗಳ ನಡುವೆ ಹೇಗೆ ಹಂಚಬಹುದು ಎಂದು ಶಿಫಾರಸ್ಸು ಮಾಡುವ ಎಲ್ಲಾ ಅಧಿಕಾರ ಈ ಕಮೀಷನ್‌ಗೆ ಇದೆ. ಆದ್ದರಿಂದ ಕಮೀಷನ್ ಕೇಂದ್ರ ಸರ್ಕಾರ ಹಾಕಿರುವ ಕಟ್ಟುಪಾಡುಗಳು, ನಿಯಮಗಳಿಗೆ ಬದ್ಧವಾಗಿರಬೇಕಾಗಿಲ್ಲ.

2. ಆರ್ಥಿಕ ಕಮೀಷನ್ ದೇಶದಲ್ಲಿ ಉದ್ಭವಿಸಿರುವ ವಿಶಿಷ್ಟ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಳ್ಳಬೇಕು. 8ನೇ ಪುಟಕ್ಕೆ

ಕಾಂಗ್ರೆಸ್ (ಐ) ಏಜೆಂಟರಾಗಿರುವ ರಾಜ್ಯಪಾಲರ ವಿರುದ್ಧ ಚಳುವಳಿ ಆರಂಭಿಸಲು ಸಿ.ಪಿ.ಐ.(ಎಂ) ನಿರ್ಧಾರ

ಪ್ರಜಾಪ್ರಭುತ್ವದ, ಭಾರತೀಯ ಸಂವಿಧಾನದ ನೀತಿಗಳನ್ನು ಉಲ್ಲಂಘಿಸಿ ರಾಜ್ಯ ಸರ್ಕಾರದ ಸಲಹೆಗಳನ್ನು ತಿರಸ್ಕರಿಸುತ್ತಿರುವ ಕೇರಳದ ರಾಜ್ಯಪಾಲರಾದ ರಾಮ್‌ದುಲಾರಿ ಸಿನ್ಹಾರವರ ವಿರುದ್ಧ ಪ್ರತಿಭಟನಾ ಚಳುವಳಿ ನಡೆಸಲು ಸಿ.ಪಿ.ಐ.(ಎಂ)ನ ಕೇರಳ ರಾಜ್ಯ ಸಮಿತಿ ನಿರ್ಣಯಿಸಿದೆ. ಅವರನ್ನು ತಕ್ಷಣ ವಾಪಸು ಕರೆಸಿಕೊಳ್ಳಬೇಕೆಂದು ಅದು ರಾಷ್ಟ್ರಪತಿಗಳನ್ನು ಒತ್ತಾಯಿಸಿದೆ.

ರಾಜ್ಯಪಾಲರಿಗೆ ಅಧಿಕಾರ ವಹಿಸಿಕೊಂಡ ದಿನದಿಂದಲೇ ಎಲ್.ಡಿ.ಎಫ್. ಸರ್ಕಾರದ ವಿರುದ್ಧ ಪಕ್ಷಪಾತ ಪೂರ್ಣ ನಿಲುವು ತಳೆಯುತ್ತಾ ಬಂದಿರುವ ಶ್ರೀಮತಿ ರಾಮ್‌ದುಲಾರಿ ಸಿನ್ಹಾರವರ ಇತ್ತೀಚಿನ ಸಂವಿಧಾನ ಬಾಹಿರ ಉದ್ಧಟತನದ ಕೆಲಸವೆಂದರೆ ಕೇರಳ ಹಾಗೂ ಕೋಝಿಕೋಡ್ ವಿಶ್ವವಿದ್ಯಾನಿಲಯಗಳ ಸೆನೇಟುಗಳಿಗೆ ರಾಜ್ಯ ಸರ್ಕಾರ ಸೂಚಿಸಿದ

ಪುಟ 8 ಕ್ಕೆ

ತಮಿಳುನಾಡಿನ ನಮ್ಮ ಪಕ್ಷದ ದಿನಪತ್ರಿಕೆ ವಿಧಾನಸಭಾ ಚುನಾವಣೆಗಳ ಸಂದರ್ಭದಲ್ಲಿ ಕಾಂಗ್ರೆಸ್(ಐ) ನೀತಿಗಳ ಗೋಸಂಬಿತನವನ್ನು ಗೇಲಿ ಮಾಡುವ ವ್ಯಂಗ್ಯ ಚಿತ್ರಗಳ ಮಾಲಿಕೆಯೊಂದನ್ನು ಪ್ರಕಟಿಸಿದೆ. ದಿನಪತ್ರಿಕೆಯ ಮಧ್ಯ ಪುಟದಲ್ಲಿ ದಿನಕ್ಕೊಂದರಂತೆ ಪ್ರತಿದಿನ ಮುದ್ರಿಸುತ್ತಿದ್ದ ಈ ವ್ಯಂಗ್ಯ ಚಿತ್ರಗಳು ಪೋಸ್ಟರುಗಳಂತೆಯೂ ಉಪಯೋಗವಾಗುವಂತಿದ್ದವು. ಒಂದು ಮಾದರಿಯನು ಇಲ್ಲಿ ಪ್ರಕಟಿಸಿದೇವೆ.



ಯೋಚಿಸಿ ! ಮತನೀಡಿ! ಪ್ರಕಟಣೆ: 'ತೀಕದೀರ್'

ಹಡಗು ಯಾನದ ಪ್ರವರ್ತಕರು..

ಕಮಿಶನ್ ನುಂಗಿದವರು..

ಒಳಪುಟಗಳಲ್ಲಿ

ಬೆಂಗಳೂರಿನಲ್ಲಿ....

ಟಿಡೊಂಬ ಮೌನ ಮೆರವಣಿಗೆ ಆದರೆ ಒಡಲಲ್ಲಿ ಮಾತ್ರ ... ಸಂಚಾರ, ಮೌನ ಸಿಟ್ಟು ನೋವುಗಳ ಮೊತ್ತದಂತಿತ್ತು.

ಸೆಪ್ಟೆಂಬರ್, ೯ ಸಫ್ದರ್ ಹಷ್ಮಿಯ ಕೊಲೆಯನ್ನು ಖಂಡಿಸಲು ಅಖಿಲಭಾರತ ಪ್ರತಿಭಟನಾ ದಿನವನ್ನು ಆಚರಿಸಲು ನೀಡಿದ ಕರೆಯಂತೆ ಬೆಂಗಳೂರಿನಲ್ಲಿ ಪ್ರತಿಭಟನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

'ಸಮುದಾಯ' ಸಾಂಸ್ಕೃತಿಕ ತಂಡದ ನೇತೃತ್ವದಲ್ಲಿ ಸಂಘಟಿಸಲಾಗಿದ್ದ ಈ ಪ್ರತಿಭಟನೆಯಲ್ಲಿ ಕರ್ನಾಟಕ ಪ್ರಗತಿ ಪರ ಕಲಾವಿದರ ಒಕ್ಕೂಟ (ಪಿ.ಪಿ.ಎ.ಸಿ.) ಜನತೆಗಾಗಿ ಕಲಾವಿದರು ಹಾಗೂ ವಿವಿಧ ರಂಗ ತಂಡಗಳ ಕಾರ್ಯಕರ್ತರು, ಬುದ್ಧಿಜೀವಿಗಳು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಸಂಗಾತಿಗಳು ಸೇರಿದ್ದರು.

ಸಫ್ದರ್‌ಹಷ್ಮಿ ಕೊಲೆ ಪ್ರಜಾಪ್ರಭುತ್ವದ ಕಗ್ಗೊಲೆ, ಸಫ್ದರ್ ಹಷ್ಮಿ ಮೇಲಿನ ಹಲ್ಲೆ, ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಹಲ್ಲೆ ಫಲಕಗಳನ್ನು ಹಿಡಿದು ಮೆರವಣಿಗೆ ಸಾಗಿತು. ಮೆರವಣಿಗೆಯ ಮುಂಭಾಗದಲ್ಲಿ ಸಫ್ದರ್ ಹಷ್ಮಿಯವರ ಬೃಹತ್‌ಫಲಕಗಳನ್ನು ಹಿಡಿಯಲಾಗಿತ್ತು. ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಹಲ್ಲೆಯನ್ನು ಖಂಡಿಸಿ ಹಲವು ಘೋಷಣೆಗಳು ಬರಹದಲ್ಲಿ ಕುಳಿತಿತ್ತು.

ಮೈಸೂರ್‌ಬ್ಯಾಂಕ್ ವೃತ್ತದಿಂದ ಮೆರವಣಿಗೆ ಜನನಿಬಿಡ ಗಾಂಧಿನಗರದ ಬೀದಿ ಬೀದಿಗಳಲ್ಲಿ ಸಾಗಿದಾಗ ನೋಡುಗರಿಗೆ ವಿಚಿತ್ರ ಅನುಭವ ನೀಡುತ್ತಿತ್ತು. ಘೋಷಣೆಗಳಿಲ್ಲದೆ ನೋವೇ ಹೆಪ್ಪುಗಟ್ಟಿದಂತಹ ಮೆರವಣಿಗೆಗೆ ಸಂತಾಪದ ಅನೇಕ ಉದ್ಗಾರಗಳು ಹೊರ ಬಂದವು.

ರಾಜಭವನಕ್ಕೆ ತೆರಳಿ ನಂತರ ರಾಜ್ಯಪಾಲರಿಗೆ ಕಾಂಗ್ರೆ ಕೃತ್ಯವನ್ನು ಖಂಡಿಸಿ ಮನವಿ ನೀಡಲಾಯಿತು. ನಂತರ ಅದೇ ಸಂಜೆ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಪ್ರತಿಭಟನಾ ಸಭೆ ಇಟ್ಟುಕೊಳ್ಳಲಾಗಿತ್ತು. ಸಭೆಯಲ್ಲಿ ಹಲವು ಸಂಘಟನೆ ಗಳ ಪ್ರತಿನಿಧಿಗಳು ಮಾತನಾಡಿ ಕಗ್ಗೊಲೆಯನ್ನು ಖಂಡಿಸಿದರು.

ಸಫ್ದರ್ ಕರ್ನಾಟಕಕ್ಕೆ ಹೊಸಬರೇನಲ್ಲ. ತಮ್ಮ ಬೀದಿ ನಾಟಕಗಳ ಮೂಲಕ ಸಫ್ದರ್ ಕರ್ನಾಟಕದಲ್ಲಿಯೂ ಹೆಸರಾಗಿದ್ದರು. ಇವರ ಖ್ಯಾತ ಬೀದಿ ನಾಟಕ 'ಹೆಣ್ಣು' ಇಡೀ, ಕರ್ನಾಟಕದಲ್ಲಿ ಪ್ರದರ್ಶನ ಕಂಡಿದೆ. ಸಫ್ದರ್ ದೆಹಲಿಯಲ್ಲಿ ಕನ್ನಡ ಕಲಿತು ರ‍್ಯಾಂಕ್ ಗಳಿಸಿದ ವಿದ್ಯಾರ್ಥಿ. ಸಫ್ದರ್‌ರವರು ಬೀದಿ ನಾಟಕ ಚಳುವಳಿ ಕುರಿತು ಬರೆದಿದ್ದ ಹಲವು ಬರಹಗಳು 'ಸಮುದಾಯ ವಾರ್ತಾಪತ್ರ'ದಲ್ಲಿ ಪ್ರಕಟವಾಗಿದೆ.





ಈ ದಿನ ಹಾಷ್ಮಿ....

ಸಫ್ದರ್ ಹಾಷ್ಮಿಯ ಕೊಲೆ ಇಡೀ ದೇಶದಲ್ಲಿ ಪ್ರತಿಭಟನೆಯ ಅಲೆಗಳನ್ನು ಎಬ್ಬಿಸಿದೆ. ಸಫ್ದರ್ ಕೊಲೆಗೆ ಪತ್ರಿಕೆಗಳು ಸ್ಪಂದಿಸಿದ ರೀತಿ ಅನನ್ಯ. ಎಲ್ಲಾ ಪತ್ರಿಕೆಗಳು ವರದಿ ಪ್ರಕಟಿಸಿ, ಲೇಖನ ಬರೆದು, ಸಂಪಾದಕೀಯಗಳ ಮೂಲಕ ಸಫ್ದರ್ ಕೊಲೆಯನ್ನು ಪ್ರತಿಭಟಿಸಿತು. ವಿವಿಧ ಪತ್ರಿಕೆಗಳ ಸಂಪಾದಕೀಯಗಳಿಂದ ಆಯ್ದ ಭಾಗಗಳು:

ಸಫ್ದರ್‌ನ ರಾಜಕೀಯ ಚಿಂತನೆಯ ಶಕ್ತಿ, ಪಕ್ಷಕ್ಕಿದ್ದ ಬದ್ಧತೆ, ಹಾಗೂ ಆತನ ಸಂದೇಶಗಳಿಗಿದ್ದ ಮಹತ್ವವನ್ನು ಕಾಂಗ್ರೆಗೆ ತಡೆಯಲು ಸಾಧ್ಯವಾಗಲಿಲ್ಲ

-ದಿ ಟೆಲಿಗ್ರಾಫ್

ವಿರೋಧದ ದನಿಯನ್ನು ಮೆಟ್ಟಲು ಯಾವ ಹಂತಕ್ಕೆ ಇಳಿಯಬಹುದು ಎಂಬುದನ್ನು ಈ ಘಟನೆ ಎತ್ತಿ ತೋರಿಸುತ್ತದೆ

-ಹಿಂದೂಸ್ತಾನ್ ಟೈಮ್ಸ್

ಜನವರಿ ಒಂದರ ಘಟನೆ ಕಾಂಗ್ರೆನ ಹೇಗಾದರೂ ಮಾಡಿ ಗೆಲ್ಲಲೇಬೇಕೆಂಬ ನೀತಿಗೆ ಸಾಕ್ಷಿ...

-ದಿ ಸ್ಟೇಟ್ಸ್‌ಮನ್

ಈ ಕೊಲೆ ಕಾಂಗ್ರೆನ ಹಾಗೂ ಅದರ ಬೆಂಬಲಿಗರ ಅಸಹನೆಯನ್ನು ಮಾತ್ರವಲ್ಲದೆ ಪ್ರತಿಯೊಬ್ಬ ನಾಗರೀಕನೂ ಮುಂದೆ ಎದುರಿಸಬೇಕಾದ ಕರಾಳ ದಿನಗಳ ಮುನ್ಸೂಚಿ

-ಎಕ್ನಾಮಿಕ್ ಟೈಮ್ಸ್

ಈ ಕೊಲೆ ಅತ್ಯಂತ ಅಮಾನವೀಯ ಹಾಗೂ ಸರ್ಕಾರದ ಸೆನ್ಸಾರ್ ನೀತಿಗಳ ಕ್ರೂರ ಅಟ್ಟಹಾಸ

-ದಿ ವೀಕ್

ಈ ದಿನ ಹಾಷ್ಮಿ ನಾಳೆ ನಾನು

-ಹಬೀಬ್ ತನ್ವೀರ್, ಖ್ಯಾತ ನಿರ್ದೇಶಕ, ನಾಟಕಕಾರ.

ಕಲಾವಿದರನ್ನು ಹತ್ಯೆ ಮಾಡುವ ಪ್ರಯತ್ನಗಳನ್ನು ಹತ್ತಿಕ್ಕದಿದ್ದರೆ ನಮ್ಮ ಕಥೆ ಮುಗಿದಂತೆ

-ಎಂ.ಕೆ.ರೈನಾ, ನಟಿ.

ಹಷ್ಮಿಯವರ ಕೊಲೆ ಸರ್ಕಾರದ ವಿಚಿತ್ರ ಸಾಂಸ್ಕೃತಿಕ ನೀತಿಯನ್ನು ಸಾರುತ್ತದೆ.

ಗೋವಿಂದ ನಿಹಲಾನಿ, ತಮಸ್ ನಿರ್ದೇಶಕ.

ನಾವು ನಮ್ಮ ಹಾಡುಗಳನ್ನು ಹಾಡುತ್ತೇವೆ ಆದರೆ ಅವು ಅವರಿಗೆ ಇಷ್ಟವಾಗುವುದಿಲ್ಲ

-ಪೌಲ್ ರೊಬೇಸನ್, ಖ್ಯಾತ ಹಾಡುಗಾರ.

ಹಲವು ಶಬ್ದಗಳು ನಮ್ಮನ್ನು ಬದುಕುವಂತೆ ಮಾಡುತ್ತವೆ ಅವು ಪ್ರೀತಿ, ಹೂ ಮ ಕಾಮ್ರೇಡ್ ಹಾಗೂ ಸಫ್ದರ್

-ಸುಧೀರ್ ಯಾರ್ದಿ,

ಸಫ್ದರ್‌ಗೆ ಓದುಗರೊಬ್ಬರ ಕಾವನ ಕಾಣಿಕೆ.

ರಾಜೀವ್ ನಮ್ಮನ್ನು 21ನೇ ಶತಮಾನಕ್ಕೆ ಒಯ್ಯುವ ರೀತಿ ಅಬ್ಬಾ!

-ಕೆ.ಎಂ.ಶ್ರೀನಿವಾಸಗೌಡ

ಓದುಗರ ಪತ್ರದಲ್ಲಿ.

ಹಸಿವಿನಿಂದ ಸಾಯುತ್ತಿರುವ ನಾವು ಸಾವಿಗೆ ಹೆದರುತ್ತೇವೇಯೆ?

-ಹಷ್ಮಿ ಅಂತಿಮ ಯಾತ್ರೆಯಲ್ಲಿ ಹಾಡಿದ ಹಾಡು.

ವೀರ ಹುತಾತ್ಮನಿಗೆ ಧೀರ ನಮನ ದೆಹಲಿ ರಾಜ್ಯ ಸಮಿತಿ ಶ್ರದ್ಧಾಂಜಲಿ

ಸಿ.ಪಿ.ಐ.(ಎಂ)ನ ದೆಹಲಿ ರಾಜ್ಯ ಸಮಿತಿ ಜನವರಿ 3ರಂದು ಸಭೆ ಸೇರಿ ಕಾ. ಸಫ್ದರ್ ಹಷ್ಮಿಗೆ ಶ್ರದ್ಧಾಂಜಲಿ ಅರ್ಪಿಸುವ ಒಂದು ನಿರ್ಣಯವನ್ನು ಅಂಗೀಕರಿಸಿತು.

ದೆಹಲಿ ನಗರ ಮಾರ್ಕ್ಸ್‌ವಾದ-ಲೆನಿನ್ ವಾದದಿಂದ ಸಂಪನ್ನನಾಗಿದ್ದ ಒಬ್ಬ ಸಮರಧೀರ ಸಾಂಸ್ಕೃತಿಕ ಕಾರ್ಯಕರ್ತನನ್ನು ಹಾಗೂ ಅಸಾಮಾನ್ಯ ಸಮಗ್ರತೆಯ ಒಬ್ಬ ಕಲಾವಿದನನ್ನು ಕಳೆದುಕೊಂಡಿತು ಎಂದು ನಿರ್ಣಯ ತನ್ನ ಅತೀವ ಶೋಕವನ್ನು ವ್ಯಕ್ತಪಡಿಸಿತು.

ಸಫ್ದರ್ ಹಷ್ಮಿ 1976ರಲ್ಲಿ ಪಕ್ಷ ಸೇರಿದರು. ಅವರಿಗೆ 34ವರ್ಷ ವಯಸ್ಸು. ದೆಹಲಿ ವಿಶ್ವ ವಿದ್ಯಾನಿಲಯದಿಂದ ಸ್ನಾತಕ ಪದವಿ ಪಡೆದ ಸಫ್ದರ್ ಗರ್‌ವಾಲ್ ವಿಶ್ವವಿದ್ಯಾನಿಲಯ, ಶ್ರೀನಗರ ವಿಶ್ವ ವಿದ್ಯಾನಿಲಯ ಹಾಗೂ ದೆಹಲಿ ಕಾಲೇಜಿನಲ್ಲಿ ಸ್ವಲ್ಪಕಾಲ ಅಧ್ಯಾಪಕ ವೃತ್ತಿ ನಡೆಸಿ 1978ರಲ್ಲಿ ಪೂರ್ಣವಾಗಿ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಧುಮುಕಿದರು. ಎರಡು ವರ್ಷ ಅವರು ದೆಹಲಿಯಲ್ಲಿ ಪ.ಬಂಗಾಲದ ಎಡರಂಗ ಸರ್ಕಾರಕ್ಕೆ ಪತ್ರಿಕಾ ಅಧಿಕಾರಿಯೂ ಆಗಿದ್ದರು.

ಕೋಮು ಸೌಹಾರ್ದದ ಸಮಿತಿಗಾಗಿ ಇತ್ತೀಚೆಗೆ ಅವರು ಮಾಡಿದ ಕೆಲಸ ಸದಾ ಸ್ಮರಣೀಯವೆಂದಿರುವ ರಾಜ್ಯಸಮಿತಿ ಪ್ರೇಮ್‌ಚಂದ್‌ರವರ ಸಣ್ಣ ಕಥೆಯ ಸ್ವಾಧರಿಸಿದ 'ಮೋಟಾರಾಮ್ ಕಾ ಸತ್ಯಾಗ್ರಹ್' ಎಲ್ಲೆಡೆ ಗಳಿಂದಲೂ ಮೆಚ್ಚುಗೆ ಗಳಿಸಿದ ಸಫ್ದರ್‌ರವರ ನಾಟಕ ಎಂದಿದೆ.

ಕಳೆದೆರಡು ತಿಂಗಳಲ್ಲಿ ದೆಹಲಿ ಮತ್ತು ಘಾಜಿಯಾಬಾದ್‌ನ ಕಾರ್ಮಿಕ ವರ್ಗದ ಏಳು ದಿನಗಳ ಚಾರಿತ್ರಿಕ ಮುಷ್ಕರದ ಗುರಿಗಳನ್ನು ಪ್ರತಿಪಾದಿಸುವಲ್ಲಿ ಅವರು 'ಜನ ನಾಟ್ಯ ಮಂಚ್'ನ ಸಹಯೋಗಿಗಳೊಂದಿಗೆ ನಡೆಸಿದ ಅವಿಶ್ರಾಂತ ಪರಿಶ್ರಮವನ್ನು ರಾಜ್ಯ ಸಮಿತಿ ಸ್ಮರಿಸಿಕೊಂಡಿತು.

ಸಫ್ದರ್‌ರವರ ಹತ್ಯೆ ಸಿ.ಐ.ಟಿ.ಯು. ನೇತೃತ್ವದ ಸಂಘಟಿತ ಕಾರ್ಮಿಕ ವರ್ಗದ ಆಂದೋಲನದ ಸಮರಧೀರತೆಯನ್ನು ಬಗ್ಗು ಬಡಿಯಲು ಆಳುವ ವರ್ಗಗಳ ಹಾಗೂ ಮಾಲಿಕರ ಏಜೆಂಟರುಗಳು ನಡೆಸುತ್ತಿರುವ ಪ್ರಯತ್ನಗಳ ಒಂದು ಭಾಗ ಎಂದು ರಾಜ್ಯ ಸಮಿತಿ ವರ್ಣಿಸಿದೆ.

ಈ ವೀರ ಹುತಾತ್ಮನಿಗೆ ಧೀರ ನಮನ ಅರ್ಪಿಸುತ್ತಾ ರಾಜ್ಯ ಸಮಿತಿ ಸಫ್ದರ್ ಯಾವ ಧ್ಯೇಯ ಸಾಧನೆಗಾಗಿ ಬದುಕಿದರೋ, ತಮ್ಮ ಪ್ರಾಣಾರ್ಪಣೆ ಮಾಡಿದರೋ ಆ ಧ್ಯೇಯಗಳನ್ನುಎತ್ತಿ ಹಿಡಿಯುವುದಾಗಿ ಪಕ್ಷ ಹಾಗೂ ಕಾರ್ಮಿಕ ವರ್ಗದ ಪರವಾಗಿ ಪ್ರತಿಜ್ಞೆ ಮಾಡುತ್ತಾ ಸಫ್ದರ್ ಅವರ ತಾಯಿ ಕಮಾರ್‌ಹಷ್ಮಿ, ಪತ್ನಿ ಮೃಯಶ್ರೀ, ಸೋದರ ಸೋಹೈಲ್‌ಹಷ್ಮಿ, ಸೋದರಿಯರು ಹಾಗೂ ಕುಟುಂಬದ ಇತರ ಸದಸ್ಯರಿಗೆ ತನ್ನ ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ.

ಹಸಿವಲಿ ಸಾಯುವ ಮಂದಿ ಸಾವಿಗೆ ಹೆದರುವೆವೇನು ?

ಇದು ಜನ ನಾಟ್ಯ ಮಂಚ್‌ನ ಜನಪ್ರಿಯ ಗೀತೆಗಳಲ್ಲಿ ಒಂದು. ಹುತಾತ್ಮ ಸಫ್ದರ್‌ಗೆ ಪಾಲಿಟ್‌ಬ್ಯೂರೋ ಸದಸ್ಯರೂ ಸೇರಿದಂತೆ ಸಿ.ಪಿ.ಐ. (ಎಂ) ಸಂಗಾತಿಗಳು ಈ ಹಾಡಿನಿಂದಲೇ ತಮ್ಮ ಶ್ರದ್ಧಾಂಜಲಿ ಅರ್ಪಿಸುತ್ತಾ "ಭೂಖ್‌ಸೆ ಮರ್‌ನೆ ವಾಲೇ- ಕ್ಯಾ ಮೌತ್‌ಸೆ ಡರ್‌ನೆ ವಾಲೇ?"-ಎಂದು ಆಳುವ ವರ್ಗ ಗಳ ಕೊಲೆಗಾರ ಏಜೆಂಟರ ಸವಾಲನ್ನು ಸ್ವೀಕರಿಸಿದರು.

'ಜನನಾಟ್ಯಮಂಚ್'ನ ಇನ್ನೊಂದು ಪ್ರಸಿದ್ಧ ಕ್ರಾಂತಿಗೀತೆ ಸ್ವತಃ ಸಫ್ದರ್ ಹೋರಾಟದ ಮುನ್ನಡೆಗಾಗಿ ಹುತಾತ್ಮರಾದವರನ್ನು ನೆನೆಸಿಕೊಂಡು ಬರೆದ ಹಾಡು. ಈಗ ಅವರೂ ಆ ಸಾಲಿಗೆ ಸೇರಿರುವಾಗ ಅವರನ್ನು ನೆನೆಸಿಕೊಂಡು ನಾವು ಹಾಡಬೇಕಾದಗೀತೆ

ಹೋರಾಟ ಹಿಡಿದು ಕಾಮ್ರೇಡ್
ಮುಂದೇ ಮುಂದೇ ನಡೆವೆವು
ನಿಲ್ಲಿಲ್ಲವೆಂಬ ದುಗುಡ ಇದ್ದರೂ
ಮುಂದೇ ಮುಂದೇ ನಡೆವೆವು.

ಆಳುವ ವರ್ಗದ ಅಸಹನೆಯ ಪ್ರತಿಫಲನ ಪಾಲಿಟ್‌ಬ್ಯೂರೋ ಖಂಡನೆ

ಪಕ್ಷದ ಒಬ್ಬ ಯುವಕ ಹಾಗೂ ಪ್ರಮುಖ ಕಲಾವಿದರಾಗಿದ್ದ ಕಾಮ್ರೇಡ್ ಸಫ್ದರ್ ಹಷ್ಮಿ ಯವರ ಹತ್ಯೆಯ ಬಗ್ಗೆ ತನ್ನ ತೀವ್ರ ಕ್ರೋಧ ಹಾಗೂ ಆಳವಾದ ಶೋಕ ವ್ಯಕ್ತಪಡಿಸಿರುವ ಸಿ.ಪಿ.ಐ. (ಎಂ)ನ ಪಾಲಿಟ್ ಬ್ಯೂರೋ ಈ ಹತ್ಯೆ ಆಳುವ ಪಕ್ಷದ ಬೆಳೆಯು ತ್ತಿರುವ ಅಸಹನೆ ಮತ್ತು ಸರ್ವಾಧಿಕಾರತ್ವದ ಕಾರ್ಮಿಕ ವರ್ಗದ ಆಂದೋಲನವನ್ನು ದಮನ ಮಾಡಲು ಅದು ಸಮಾಜ-ಘಾತುಕ ಶಕ್ತಿಗಳೊಂದಿಗೆ, ಪೋಲೀಸರೊಂದಿಗೆ ಮಾಡಿಕೊಂಡಿ ರುವ ಕೂಟದ ಪ್ರತಿಬಿಂಬ ಎಂದು ಖಂಡಿಸಿದೆ.

ತಮ್ಮ ಸಮರ್ಪಣಾ ಭಾವದ ದುಡಿಮೆಯಿಂದ ರಾಜಧಾನಿಯ ಸಾಂಸ್ಕೃತಿಕ ಜೀವನದ ಮೇಲೆ ಶಾಶ್ವತ ಪ್ರಭಾವ ಬೀರಿದ ಕಾ॥ ಹಷ್ಮಿ ಕಾರ್ಮಿಕ ವರ್ಗದ ಧ್ಯೇಯ ಸಾಧನೆಗೆ, ದೇಶದಲ್ಲಿ ಪ್ರಗತಿ ಪರ ಸಾಂಸ್ಕೃತಿಕ ಮೌಲ್ಯ ಗಳ ಪ್ರಚಾರಕ್ಕೆ ಅಧ್ಯಾಪನ ವೃತ್ತಿ ತ್ಯಜಿಸಿ ಬಂದರು ಎಂದು ಪಾಲಿಟ್‌ಬ್ಯೂರೋ ತನ್ನ ಶ್ರದ್ಧಾಂಜಲಿ ಅರ್ಪಿಸಿದೆ. ಪ್ರಜಾ ಪ್ರಭುತ್ವ, ಜಾತ್ಯಾತೀತ ಹಾಗೂ ಪ್ರಗತಿಪರ ಸಾಂಸ್ಕೃತಿಕ ಮೌಲ್ಯ ಗಳನ್ನೂ ಗಟ್ಟಿಗೊಳಿಸಬೇಕೆಂಬ ಅವರ ಆಕಾಂಕ್ಷೆಯ ಈಡೇರಿಕೆ ಗಾಗಿ ಹೋರಾಟ ಮುಂದುವರಿ ಸುವುದೇ ಕಾ.ಹಷ್ಮಿಗೆ ನಾವು ಸಲ್ಲಿಸಬಹುದಾದ ದೊಡ್ಡ ಶ್ರದ್ಧಾಂಜಲಿ ಎಂದು ಪಾಲಿಟ್‌ಬ್ಯೂರೋ ಹೇಳಿದೆ.

ಮಹಿಳೆ ಅತ್ಯಾಚಾರ; ಸಿ.ಓ.ಡಿ. ತನಿಖೆಗೆ ಒತ್ತಾಯ

ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಕೆ.ಹೊಸಹಳ್ಳಿಯ ಬೆತ್ತಲೆ ಮೆರವಣಿಗೆ ಘಟನೆಯು ಆರುವ ಪೂರ್ವದಲ್ಲಿಯೇ ಮಾನವೀಯತೆಯನ್ನು ನಾಚಿಸುವಂತಹ ಅತ್ಯಾಚಾರ ಪ್ರಕರಣವೊಂದು ವರದಿಯಾಗಿದೆ.

ಸಿಂಧನೂರಿನ ಭೀಮರಾಜ್ ಕ್ಯಾಂಪ್‌ನಲ್ಲಿ ಡಿಸೆಂಬರ್ 27ರಂದು ಕೂಲಿಗಾಗಿ ಬಂದ ಚಾಂದಂಬೀ ಎಂಬ ಮಹಿಳೆಯ ಮೇಲೆ ಜಮೀನುದಾರ ಲಚ್ಚತ ರಾಮಯ್ಯ ಅತ್ಯಾಚಾರವೆಸಗಿದ ಘಟನೆ ಊರಿನ ಜನತೆಯನ್ನು ರೊಚ್ಚಿಗೆಬ್ಬಿಸಿತು. 300 ರೈತರು ಜಮೀನುದಾರನ ಮನೆ ಘೇರಾವೋ ಮಾಡಿದರು. ಈ ವೇಳೆಗಾಗಲೇ ಅಲ್ಲಿಂದ ಪರಾರಿಯಾಗಿದ್ದ ಜಮೀನುದಾರ ರಕ್ಷಣೆ ಪಡೆಯಲು ಪೊಲೀಸರನ್ನು ಸುಳ್ಳು ಸರ್ಟಿಫಿಕೇಟ್ ನೀಡಲು ಡಾಕ್ಟರನ್ನು ಸೃಷ್ಟಿಸಿದನು. ಸಿಂಧನೂರಿನ ಅಖಿಲಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ, ಡಿ.ವೈ.ಎಫ್.ಐ. ಮುಂತಾದ ಸಂಘಟನೆಗಳು ಈ ಘಟನೆಯ ಕುರಿತು ಕೂಡಲೇ ಕಾರ್ಯೋನ್ಮುಖವಾದವು. ಚಾಂದ್‌ಬೀಯನ್ನು ಪರೀಕ್ಷಿಸಿದ ಡಾ॥ ಶಿವನಾಗಮ್ಮ ಅತ್ಯಾಚಾರ ನಡದೇ ಇಲ್ಲವೆಂದು ಏಕಾಏಕಿಯಾಗಿ ನೇರವಾಗಿ ಪತ್ರಿಕೆಗಳಿಗೆ ಹೇಳಿಕೆ ನೀಡಿದರೆ ಅಪರಾಧಿ ಜಮೀನುದಾರ ಅಲ್ಲೇ ಇದ್ದರೂ ಈವರೆವಿಗೂ ಪೊಲೀಸರು ಬಂಧಿಸದಿರುವುದು ನಿಜಕ್ಕೂ ನಾಚಿಕೆಗೇಡಿನ ಸಂಗತಿ.

ಈ ಘಟನೆ ಪ್ರತಿಭಟಿಸಿ ಜನವರಿ 5 ರಂದು ಸಿಂಧನೂರಿನಲ್ಲಿ 800 ಜನರ ಬೃಹತ್ ಮೆರವಣಿಗೆ ಬಹಿರಂಗ ಸಭೆ ನಡೆಸಲಾಯಿತು ಈ ಸಭೆಯನ್ನುದ್ದೇಶಿಸಿ ಶ್ರೀಮತಿ ಹರಿಣಿ ಕಕ್ಕೇರಿ, ರತ್ನಮ್ಮ ಮೇರಿನಾಳ, ವೆಂಕನಗೌಡ, ಬಿ.ಲಿಂಗಪ್ಪ, ಶೇಕ್ಷಾದ್ರಿಯವರುಗಳು ಮಾತನಾಡಿದರು. ಪ್ರಜಾಸತ್ತಾತ್ಮಕ · ಮಹಿಳಾ ಸಂಘಟನೆ, ಡಿ.ವೈ.ಎಫ್.ಐ., ಎಸ್.ಎಫ್.ಐ., ಪ್ರಾಂತ ರೈತ ಸಂಘ, ಕೃಷಿ ಕೂಲಿಗಾರರ ಸಂಘಟನೆ, ಸಿ.ಐ.ಟಿ.ಯು., ಸಮುದಾಯ, ಅಕ್ಕ ಮಹಾದೇವಿ ಮಂಡಳಿ, ವಾಸವಿ ಯುವಜನ ಸಂಘ, ಅಂಬೇಡ್ಕರ್ ಯುವಕ ಮಂಡಲ, ಮುಸ್ಲಿಂ ಸಂಘಟನಾ ಸಮಿತಿ, ವಿಕಾಸ್ ಯುವಕ ಮಂಡಲ ಮುಂತಾದ ಸಂಘಟನೆಗಳು 'ಅತ್ಯಾಚಾರ ಪ್ರತಿಭಟನಾ ಸಮಿತಿ ರಚಿಸಿಕೊಂಡು ಹೋರಾಟವನ್ನು ಮುನ್ನಡೆಸಿದ್ದಾರೆ. ಈ ಘಟನೆ ಕುರಿತು ಸಿ.ಓ.ಡಿ. ತನಿಖೆ ನಡೆಸಿ, ನೊಂದ ಚಾಂದ್‌ಬಿಗೆ ರಕ್ಷಣೆ, ಜಮೀನುದಾರನ ದಸ್ತಗಿರಿ, ಪೊಲೀಸ್ ಇಲಾಖೆಗೆ ಮಹಿಳಾ ಪೊಲೀಸರ ನೇಮಕ, ಅತ್ಯಾಚಾರ, ವರದಕ್ಷಿಣೆ, ಬೆತ್ತಲೆ ಮೆರವಣಿಗೆಯಂತಹ ಸಾಮಾಜಿಕ ಅನಿಷ್ಟಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂಬ ಬೇಡಿಕೆ ಮುಂದಿಟ್ಟು ಹೋರಾಟ ರೂಪಿಸಲಾಗುತ್ತಿದೆ.

ಮಹಿಳಾ ಸಂಘಟನೆ ಸಭೆ

ಅಖಿಲಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಬೆಂಗಳೂರು ಜಿಲ್ಲಾ ಸಂಘಟನಾ ಸಮಿತಿ ಆಶ್ರಯದಲ್ಲಿ ಶ್ರೀರಾಮಪುರದಲ್ಲಿ ಡಿಸೆಂಬರ್ 25 ರಂದು ಮಹಿಳೆಯರ ಸಭೆಯೊಂದನ್ನು ನಡೆಸಿತು. ಈ ಸಭೆಯಲ್ಲಿ ದುಡಿಯುವ ಮಹಿಳೆಯರ ರಾಜ್ಯ ಸಂಚಾಲಕಿ ಶ್ರೀಮತಿ ಕಾ॥ ಎಂ.ರಾಜಮ್ಮ, ಜಿಲ್ಲಾ ಸಂಚಾಲಕಿ ಕಾ॥ ವಿಮಲ ಕೆ.ಎಸ್. ಹಾಗೂ ಕೆ.ಶಾಂತಕುಮಾರಿಯವರು ಮಾತನಾಡಿ ಮಹಿಳೆಯರು ಮಹಿಳಾ ಸಂಘಟನೆಯನ್ನು ಬಲಿಷ್ಠವಾಗಿ ಕಟ್ಟಿ ಬೆಳೆಸಲು ಮುಂದೆ ಬರಬೇಕೆಂದು ಕರೆ ನೀಡಿದರು. ದುಡಿಯುವ ಮಹಿಳೆ ಎದುರಿಸುತ್ತಿರುವ ಸಂಕಷ್ಟಗಳ ಕುರಿತು ಕಾ॥ ಪಿ.ಕೆ.ಸುಬ್ರಮಣಿಯವರು ಮಾತನಾಡಿದರು. ಶ್ರೀರಾಮಪುರ ಘಟಕದ ಸಂಚಾಲಕಿ ಶ್ರೀಮತಿ ಜಯಲಕ್ಷ್ಮಿಯವರು ಮೊದಲಿಗೆ ಸ್ವಾಗತಿಸಿ ಶ್ರೀಮತಿ ರಾಜೇಶ್ವರಿ ಅಧ್ಯಕ್ಷತೆ ವಹಿಸಿದ್ದರು. ಶಾರದಮ್ಮನವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

ಬೋರ್‌ವೆಲ್ ಸೌಲಭ್ಯಕ್ಕಾಗಿ ಮನವಿ

ಬೆಂಗಳೂರಿನ ರಾಜಗೋಪಾಲ್ ನಗರದಲ್ಲಿರುವ ಸುಮಾರು ಐದುನೂರು ಗುಡಿಸಲು ನಿವಾಸಿಗಳು ಕುಡಿಯುವ ನೀರಿಗಾಗಿ ಪಡುತ್ತಿರುವ ವಿಪರೀತ ತೊಂದರೆ ಹೇಳತ್ತೀರದಾಗಿದೆ. ಈ ಸಮಸ್ಯೆ ಬಗೆಹರಿಸಿ ಈ ಪ್ರದೇಶಕ್ಕೊಂದು ಬೋರ್‌ವೆಲ್ ವ್ಯವಸ್ಥೆ ಮಾಡಬೇಕೆಂದು ಜನತೆಯಿಂದ ಸಂಗ್ರಹಿಸಿ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳನ್ನು ಸಂಘಟನೆಯ ಸ್ಥಳೀಯ ಸಂಚಾಲಕಿ ಕಾ॥ ಕೆ.ಶಾಂತಕುಮಾರಿಯವರು ಒತ್ತಾಯಿಸಿದ್ದಾರೆ.

ನೆಲ್ಸನ್‌ಮಂಡೇಲಾ ಗೌರವಾರ್ಥ ರಂಗೋಲಿ ಸ್ಪರ್ಧೆ

ಬಳ್ಳಾರಿ ಜಿಲ್ಲೆ ಹೂವಿನ ಹಡಗಲಿಯಲ್ಲಿ ಮಹಿಳಾ ಸಂಘಟನೆ ಆಶ್ರಯದಲ್ಲಿ ಜನವರಿ 1ರಂದು ನೆಲ್ಸನ್ ಮಂಡೇಲಾ ಗೌರವಾರ್ಥ ರಂಗೋಲಿ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಸ್ಪರ್ಧೆಯಲ್ಲಿ 26 ಜನರ ಮಹಿಳೆಯರು ಪಾಲ್ಗೊಂಡಿದ್ದರು. ನಂತರ ನಡೆದ ಬಹುಮಾನ ವಿತರಣಾ ಸಮಾರಂಭದಲ್ಲಿ ಮೈಸೂರು ಭರಮಪ್ಪ, ಶ್ರೀಕಾಂತ್ ಹವಾಲ್ದಾರ್, ಶ್ರೀಮತಿ ಅಂಬಿಗಾರ್, ಟಿ.ಕಲಾವತಿ, ಮಾತನಾಡಿದರು. ತೀರ್ಪುಗಾರರಾದ ಶಿಕ್ಷಕ ಎಂ.ಟಿ.ವೇದಮೂರ್ತಿ, ಶಾಂತಮ್ಮರವರುಗಳು ರಂಗೋಲಿಯ ವಿನ್ಯಾಸಗಳ ಕುರಿತು ಮಾತನಾಡಿದರು. ಮುಖ್ಯೋಪಾಧ್ಯಾಯ ಪಿ.ಪಾಲಯ್ಯನವರು ಬಹುಮಾನ ವಿತರಿಸಿದರು.

ಪಿ.ಯು.ಸಿ ಮಂಡಳಿ ರದ್ದು ಹಾಗೂ ಪರೀಕ್ಷಾ ಸುಗ್ರಿವಾಜ್ಞೆ ವಿರೋಧಿಸಿ

ರಾಜ್ಯಾದ್ಯಂತ ಚಳುವಳಿ

ತುಮಕೂರು

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ರಾಜ್ಯ ಸಮಿತಿ ನೀಡಿದ ಕರೆಯಂತೆ ಡಿಸಂಬರ್ 26ರಂದು ತುಮಕೂರಿನ ವಿವಿಧ ಕಾಲೇಜುಗಳಿಂದ ಬಂದ 2ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಟೌನ್‌ಹಾಲ್ ವೃತ್ತದ ಬಳಿ ರಸ್ತೆ ತಡೆ ಚಳುವಳಿ ನಡೆಸಲಾಯಿತು. ಸುಗ್ರಿವಾಜ್ಞೆ ಜಾರಿಗೊಳಿಸುವ ಮೊದಲು ವಿದ್ಯಾರ್ಥಿ-ಶಿಕ್ಷಕ ಸಂಘಗಳೊಂದಿಗೆ ಸಮಾಲೋಚನೆ ನಡೆಸದೇ ಸರ್ವಾಧಿಕಾರಿ ರೀತಿಯಲ್ಲಿ ವಿದ್ಯಾರ್ಥಿ-ಅಧ್ಯಾಪಕರನ್ನು ಅಪರಾಧಿಗಳನ್ನಾಗಿ ಮಾಡಿ ಸೆರೆಮನೆಗೆ ಕಳುಹಿಸುವ ಹಾಗೂ ಪಿ.ಯು.ಸಿ. ಮಂಡಳಿ ರದ್ದುಗೊಳಿಸಿ ಉನ್ನತ ಶಿಕ್ಷಣವನ್ನು ಕಡಿತಗೊಳಿಸುವ ಅದರ ಮೌಲ್ಯವನ್ನೂ ಕೆಳಗಿಳಿಸುವ ಸರ್ಕಾರದ ನೀತಿಯನ್ನು ಉಗ್ರವಾಗಿ ಖಂಡಿಸಲಾಯಿತು. ಜಿಲ್ಲಾ ಕಾರ್ಯದರ್ಶಿ ಕಾ॥ ಬಿ. ಉಮೇಶ್ ಸಹಕಾರ್ಯದರ್ಶಿ ಕಾ॥ ಬಿ.ಕರಿಯಣ ಹಾಗೂ ಅಧ್ಯಕ್ಷ ಇ. ಬಸವರಾಜು ಈ ರಸ್ತೆ ತಡೆ ಚಳುವಳಿಯ ಮುಖಂಡತ್ವ ವಹಿಸಿದ್ದರು.

ರಾಯಚೂರು

ರಾಯಚೂರು ನಗರದ 5 ಶಾಲಾ ಕಾಲೇಜುಗಳ ನೂರಾರು ವಿದ್ಯಾರ್ಥಿಗಳು ಡಿಸೆಂಬರ್ 29ರಂದು ತರಗತಿ ಬಹಿಷ್ಕರಿಸಿ ಪ್ರತಿಭಟನಾ ಮೆರವಣಿಗೆಯೊಂದನ್ನು ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾ॥ ರಾಮನಗೌಡ ಸಭೆಯನ್ನುದ್ದೇಶಿಸಿ ಮಾತನಾಡಿ ಶಿಕ್ಷಣ ವ್ಯವಸ್ಥೆಯಲ್ಲಿನ ದೋಷವನ್ನು ಸರಿಪಡಿಸದೇ ವಿದ್ಯಾರ್ಥಿಗಳನ್ನು ನಕಲು ಮಾಡುವ ನೆಪವೊಡ್ಡಿ ಸೆರೆಮನೆ ತಳ್ಳುವ ಸುಗ್ರಿವಾಜ್ಞೆಯನ್ನು ತೀವ್ರವಾಗಿ ಖಂಡಿಸಿದರು. ನಗರ ಸಮಿತಿ ಅಧ್ಯಕ್ಷ ಬಸವರಾಯ ಮಾತನಾಡಿ ಪಿ.ಯು.ಸಿ. ಮಂಡಳಿ ರದ್ಧತಿ ಕೈಬಿಡಬೇಕೆಂದು ಒತ್ತಾಯಿಸಿದರು. ಕಾ॥ ಮಹಾದೇವರವರು ಪ್ರದರ್ಶನದಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

ಕುಷ್ಟಗಿ

ವಿದ್ಯಾರ್ಥಿ ಮುಖಂಡ ಕಾ॥ ಶರಣಪ್ಪನವರ ನೇತೃತ್ವದಲ್ಲಿ ಮುನ್ನೂರು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಪ್ರತಿಭಟನಾ ಮೆರವಣಿಗೆ ನಡೆಸಿ, ತಹಸೀಲ್ದಾರ್‌ರವರಿಗೆ ಮನವಿ ಪತ್ರ ಅರ್ಪಿಸಿದರು.

ಜನವರಿ 26ರಂದು ಲಿಂಗಸುಗೂರಿನ ಮುದಗಲ್‌ನಲ್ಲಿ ಪರೀಕ್ಷಾ ಸುಗ್ರಿವಾಜ್ಞೆ ಹಾಗೂ ಪಿ.ಯು.ಸಿ. ಮಂಡಳಿ ರದ್ದು ವಿರುದ್ಧ ಶಾಲಾ-ಕಾಲೇಜಿನ ವಿದ್ಯಾರ್ಥಿಗಳು ಮೆರವಣಿಗೆ ನಡೆಸಿದರು.

ಜೇವರ್ಗಿ

ಡಿಸೆಂಬರ್ 29ರಂದು ಜೇವರ್ಗಿಯ ಎಲ್ಲಾ ಶೈಕ್ಷಣಿಕ ಸಂಸ್ಥೆಗಳಲ್ಲಿ ಸಂಪೂರ್ಣ ಬಂದ್ ಆಚರಿಸಿದ ಸಾವಿರಾರು ವಿದ್ಯಾರ್ಥಿಗಳು ಪದವಿ ಕಾಲೇಜು ಆವರಣದಿಂದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ತಹಶೀಲ್ದಾರ್ ಕಛೇರಿ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಸಿ ಮನವಿ ಅರ್ಪಿಸಲಾಯಿತು. ನಂತರ ನಡೆದ ಸಭೆಯಲ್ಲಿ ರಾಜ್ಯ ಸಮಿತಿ ಸದಸ್ಯ ಕಾ॥ ನಿಂಗಣ್ಣ, ಮೋರಟಗಿ, ನಗರ ಸಮಿತಿ ಅಧ್ಯಕ್ಷ ಕೆ. ಶಿವರಾಯ ಹರನೂರ ಮಾತನಾಡಿದರು. ಕಾ॥ ಎ.ಎಂ.ಎಲ್ ಬಿರಾದಾರ, ಕೆ.ಶಿವರಾಯ, ಚನ್ನಬಸವಯ್ಯ ಹಿರೇಮಠ ಬಸವರಾಜ ಬಂಡಿ, ಸುನಂದ ಮತ್ತು ಸಲ್ಲಿಕೇರಿಯವರು ಮೆರವಣಿಗೆ ನೇತೃತ್ವ ವಹಿಸಿದ್ದರು.

ರೈತ ಸಂಘದ ಚಟುವಟಿಕೆಗಳು

ತುಮಕೂರು

ಜಿಲ್ಲೆಯಲ್ಲಿ 15 -20 ವರ್ಷಗಳಿಂದ ಬಗುರ್‌ಹುಕುಂ ಸಾಗುವಳಿ ಮಾಡುತ್ತಿರುವ ಹರಿಜನರ ಜಮೀನುಗಳ ಮೇಲೆ ಸ್ಥಳೀಯ ಗ್ರಾಮಾಧಿಕಾರಿಗಳು, ಶೇಕ್‌ದಾರರು ಟಿ.ಟಿ. ಹಾಕಲು ನೂರು ರೂ.ಗಳಿಂದ ಸಾವಿರ ರೂ. ಗಳವರೆಗೆ ಲಂಚ ಸ್ವೀಕರಿಸುತ್ತಿದ್ದರು. ಈ ಕುರಿತು ಜಿಲ್ಲಾಧಿಕಾರಿಗಳು ಕೂಡಲೇ ಕ್ರಮ ಜರುಗಿಸಬೇಕೆಂದು ತುಮಕೂರು ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಕಾ॥ ಟಿ.ಕೆ.ಗೋವಿಂದರಾಜು ಹಾಗೂ ಕಾರ್ಯದರ್ಶಿ ಕಾ॥ಹೆಚ್.ಸಿ.ಚನ್ನಪ್ಪನವರು ಜಿಲ್ಲಾಧಿಕಾರಿಗಳನ್ನು ಮನವಿಯಲ್ಲಿ ಒತ್ತಾಯಿಸಿದ್ದಾರೆ. ಇತ್ತೀಚೆಗೆ ಮಳೆ ಸರಿಯಾದ ಸಮಯಕ್ಕೆ ಬೀಳದೆ ರೈತರು ಕಂಗಾಲಾಗಿರುವ ಪರಿಸ್ಥಿತಿಯಲ್ಲಿ ಹಿಂದುಳಿದ ಹರಿಜನರನ್ನು ಶೋಷಿಸುತ್ತಿರುವ ರೆವಿನ್ಯೂ ಅಧಿಕಾರಿಗಳಿಗೆ ಸ್ಥಳೀಯ ರಾಜಕೀಯ ಪುಡಾರಿಗಳು ಬೆಂಬಲಿಸುತ್ತಿರುವುದನ್ನು ಹೇಳಿಕೆಯಲ್ಲಿ ಅವರು ಖಂಡಿಸಿ ನೊಂದ ಹರಿಜನರಿಗೆ ನ್ಯಾಯ ದೊರಕಿಸಿ ಕೊಡಬೇಕೆಂದು ಒತ್ತಾಯಿಸಿದ್ದಾರೆ.

ತಿಪಟೂರು ರೈತರ ಪಾದಯಾತ್ರೆ

ಬಗರುಹುಕುಂ ಸಾಗುವಳಿದಾರ ರೈತರಿಗೆ ಸಾಗುವಳಿ ಭೂಮಿ ಮಂಜೂರು ಮಾಡಲು ರೆವಿನ್ಯೂ ಅಧಿಕಾರಿಗಳು ಹರಿಜನ-ಗಿರಿಜನರಿಂದ ನೂರು ರೂ.ಗಳಿಂದ ಸಾವಿರ ರೂ.ಗಳವರೆಗೆ ಲಂಚ ಸ್ವೀಕರಿಸುತ್ತಿರುವುದರ ವಿರುದ್ಧ ರೈತ ಸಂಘದ ತಿಪಟೂರು ಘಟಕ 25 ಕಿ.ಮೀ.ಗಳ ಪಾದಯಾತ್ರೆಯ ಮುಖಂಡತ್ವವನ್ನೂ ರೈತನಾಯಕ ಕಾ॥ ಹೆಚ್.ಸಿ.ಚನ್ನಪ್ಪ, ಬಿ.ಡಿ.ರಾಮಯ್ಯ ಸ್ಥಳೀಯ ಮುಖಂಡರಾದ ಕಾ॥ ತಿಮ್ಮಯ್ಯ, ಮಲ್ಲೇಶಯ್ಯ ರಿಯಾಜ್ ರವರುಗಳು ವಹಿಸಿದ್ದರು. ತಿಪಟೂರಿಗೆ ಭೇಟಿ ನೀಡಿದ್ದ ಜಿಲ್ಲಾಧಿಕಾರಿಗಳಿಗೆ ರೆವಿನ್ಯೂ ಅಧಿಕಾರಿಗಳ ಕಿರುಕುಳ ಕುರಿತು ವಿವರಿಸಲಾಯಿತು. ಮುಖ್ಯವಾಗಿ ಸಾಗುವಳಿ ಮಂಜೂರು ಮಾಡಬೇಕೆಂದು ಒತ್ತಾಯಿಸಲಾಯಿತು. ಉಪವಿಭಾಗಾಧಿಕಾರಿಗಳ ಮುಖಾಂತರ ರಾಜ್ಯದ ಮುಖ್ಯ ಮಂತ್ರಿಗಳಿಗೆ ಮನವಿ ಅರ್ಪಿಸಲಾಯಿತು. ಉಪವಿಭಾಗಾಧಿಕಾರಿಗಳ ಕಛೇರಿ ಎದುರು, ಧರಣಿ ಸತ್ಯಾಗ್ರಹ ಸಭೆಯನ್ನೂ ನಡೆಸಲಾಯಿತು.

ಬಂಟಾಳ

ಹತ್ತಾರುವರುಷಗಳಿಂದ ಸರ್ಕಾರಿ ಸಾಗುವಳಿ ಮಾಡುತ್ತಿರುವ ಬಡವರ ಜಮೀನು ಸಕ್ರಮಗೊಳಿಸಿ ಹಕ್ಕುಪತ್ರ ನೀಡಬೇಕೆಂದು ಒತ್ತಾಯಿಸಿ ಡಿಸೆಂಬರ್ 28ರಂದು ಬಂಟ್ವಾಳ ತಾಲ್ಲೂಕು ರೈತ ಸಂಘದ ನೂರಾರು ರೈತರು ಸಹಾಯಕ ಕಮೀಷನರ್‌ರವರನ್ನು ಒತ್ತಾಯಿಸಿದರು. ಇನ್ನೂರ ಐವತ್ತೆಂಟು ರೈತರ ವೈಯುಕ್ತಿಕ ಅರ್ಜಿಗಳನ್ನು ಈ ಸಂದರ್ಭದಲ್ಲಿ ಸಲ್ಲಿಸಲಾಯಿತು. ಶ್ರೀಮಂತ ರೈತರು ಆಕ್ರಮಿಸಿರುವ ಜಮೀನನ್ನು ಸರ್ಕಾರ ಸ್ವಾದೀನಪಡಿಸಿಕೊಂಡುಭೂರಹಿತ ಬಡ ರೈತರಿಗೆ ಹಂಚ ಬೇಕು. ಸರ್ಕಾರ ನೇಮಿಸಿರುವ 'ದಾರ್ಖಾಸ್ತು ಕಮಿಟಿಯಲ್ಲಿ ರೈತ ಸಂಘದ ಪ್ರತಿನಿಧಿಗಳಿಗೆ ಪ್ರಾತಿನಿಧ್ಯ ನೀಡಬೇಕೆಂದು, ಭೂರಹಿತ ಬಡ ರೈತರಿಗೆ ಎನ್.ಸಿ.ಆರ್. ರೆಕಾರ್ಡ್ ಆಧಾರವಾಗಿ ಪರಿಗಣಿಸದೆ ಅವರು ಬೆಳೆಯುವ ಫಸಲು, ಮರ, ಮನೆ, ಬಾವಿ, ಗದ್ದೆಗಳ ವರ್ಷ ಮಾಪನ ಮಾಡುವ ಮೂಲಕ ಹಕ್ಕು ಪತ್ರ ನೀಡಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಗಿದೆ. ನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ಜಿಲ್ಲಾಧ್ಯಕ್ಷ ಯು.ಜನಾರ್ಧನನಾಯ್ಕ, ಬಿ.ವಾಸುಗಟ್ಟಿ, ಬಿ.ನಾರಾಯಣ, ಕುದನೆ ಚನ್ನಪ್ಪ ಬಂಗೇರ ಮಾತನಾಡಿದರು.

ಬಂಟ್ವಾಳ

ಪಂಪ್‌ಸೆಟ್ ಬಳಸಿ ಹೊಳೆ, ಬಾವಿ, ಕೆರೆಗಳಿಂದ ನೀರನ್ನು ಎತ್ತುವ ಕಾರ್ಯದಲ್ಲಿ ಸೀಮೆಎಣ್ಣೆ ಬಳಕೆ ಹೆಚ್ಚಾಗುತ್ತಿದ್ದು ರಿಯಾಯಿತಿ ದರದಲ್ಲಿ ಪರ್ಮಿಟ್ ಮೂಲಕ ಅಗತ್ಯವಿರುವಷ್ಟು ಸೀಮೆಎಣ್ಣೆ ಪೂರೈಸಬೇಕೆಂದು ಡಿಸೆಂಬರ್ 28ರಂದು ಇಲ್ಲಿಗೆ ಭೇಟಿ ನೀಡಿದ ಸಹಾಯಕ ಕಮೀಷನರ್‌ರವರನ್ನು ನೂರಾರು ರೈತರು ಪ್ರದರ್ಶನ ನಡೆಸಿ ಒತ್ತಾಯಿಸಲಾಯಿತು. ನಿಯೋಗ ತೆರಳಿ ಮನವಿಅರ್ಪಿಸಲಾಯಿತು. ಕಾ॥ ವಾಸುಗಟ್ಟಿ, ನಾರಾಯಣ, ಪೂವಯ್ಯ ಬಂಗೇರ, ರುಕ್ಮಯ್ಯ ಪೂಜಾರಿ ಕುದನೆ ಚನ್ನಪ್ಪ ಬಂಗೇರ ನಿಯೋಗದಲ್ಲಿದ್ದರು.

ದ.ಕ.ಜಿಲ್ಲೆಯ ಉಳ್ಳಾಲ ಮಂಡಲ ಪಂಚಾಯಿತಿ ಉಳ್ಳಾಲ ಗ್ರಾಮದ ರೈತರು ಎದುರಿಸುತ್ತಿರುವ ಯಾವೊಂದು ಸಮಸ್ಯೆ ಬಗ್ಗೆ ನಿರ್ಲಕ್ಷ್ಯ ತೋರಿಸುತ್ತಿರುವುದನ್ನು ಪ್ರತಿಭಟಿಸಿ ಡಿಸೆಂಬರ್ 9ರಂದು ಪ್ರದರ್ಶನ ನಡೆಸಲಾಯಿತು. ಹೊಲ ಗದ್ದೆಗಳ ಬಳಿ ಸೇತುವೆ-ಕಾಲುದಾರಿ, ಅಡ್ಡಕಟ್ಟಡಗಳನ್ನು ನಿರ್ಮಿಸಲು ಹಲವಾರು ಬಾರಿ ಒತ್ತಾಯಿಸಿದರು. ಕ್ರಮ ಕೈಗೊಳ್ಳದಿರುವುದನ್ನು ಖಂಡಿಸಲಾಯಿತು. ಮನವಿ ಸ್ವೀಕರಿಸಿದ ಜಿಲ್ಲಾ ಪರಿಷತ್ ಅಧ್ಯಕ್ಷ ಹಾಗೂ ಜಿಲ್ಲಾ ಅಭಿವೃದ್ಧಿ ಮಂಡಳಿ ಅಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಆಶ್ವಾಸನೆ ನೀಡಿದರು. ಈ ನಿಯೋಗದಲ್ಲಿ ರೈತ ನಾಯಕರಾದ ಕಾ॥ ಪಾವ್ಲು ಡಿ'ಸೋಜ, ವಿಶ್ವನಾಥಬಂಗೇರ, ಯು. ಸುಂದರ, ಐಸ್ ಡಿ'ಸೋಜ, ಜೆ. ರೋಮ್ ಡಿ'ಸೋಜರವರು ಇದ್ದರು.

ಪಕ್ಷದ ಮಲೆನಾಡು ಪ್ರಾದೇಶಿಕ ಸಮಿತಿ

ಪಕ್ಷದ 13ನೇ ರಾಜ್ಯ ಸಮ್ಮೇಳನದಲ್ಲಿ ಆಯ್ಕೆಯಾದ ರಾಜ್ಯ ಸಮಿತಿ ಸದಸ್ಯರು ಡಿಸಂಬರ್ 10, 11ರಂದು ಸಭೆ ಸೇರಿ ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಯನ್ನೊಳಗೊಂಡ ಒಂದು ಪ್ರಾದೇಶಿಕ ಸಮಿತಿಯನ್ನು ರಚಿಸಿದೆ. ಪಕ್ಷದ ರಾಜ್ಯ ಸಮಿತಿ ಸದಸ್ಯರಾದ ಕಾ॥ ವಿ.ಸುಕುಮಾರ್‌ರವರು ಕಾರ್ಯದರ್ಶಿಯಾಗಿ ಆಯ್ಕೆಗೊಂಡರು. ಪ್ರಾದೇಶಿಕ ಸಮಿತಿಗೆ ಕಾ.ಕೆ.ಟಿ.ರಾಘವೇಂದ್ರ, ಜಿ.ಪಿ.ಸತ್ಯನಾರಾಯಣ , ಎಸ್. ರಾಜೇಂದ್ರ, ಕೆ.ಎಂ. ಅಬ್ದುಲ್ ಜಬ್ಬಾರ್, ಕೆ.ಸುಕುಮಾರ್, ಅಣ್ಣಿ ಮತ್ತು ಎ.ಸಿ.ಕೇಶವ ಸದಸ್ಯರಾಗಿರುತ್ತಾರೆ.

ಡಿಸೆಂಬರ್ 1 ರಂದು ನಡೆದ ಪ್ರಾದೇಶಿಕ ಸಮಿತಿಯ ಪ್ರಥಮ ಸಭೆಯಲ್ಲಿ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಕಾ॥ ಪಿ.ರಾಮಚಂದ್ರರಾವ್, ಸೆಕ್ರಟರಿಯೇಟ್ ಸದಸ್ಯರಾದ ಕಾ॥ ಸಿ. ನಂಜುಂಡಪ್ಪ ನವರು ಭಾಗವಹಿಸಿದ್ದರು. ಕಾ॥ ಕೆ. ಸುಕುಮಾರ್ ರವರು ಅಧ್ಯಕ್ಷತೆ ವಹಿಸಿದ್ದರು. ಕೈಗಾ ಅಣುಸ್ಥಾವರ ಸ್ಥಾಪನೆಗೆ ಒತ್ತಾಯಿಸಿ ಹಾಸನ, ಚಿಕ್ಕಮಗಳೂರಿನಲ್ಲಿ ಜನತೆಯ ಮತ ಪ್ರದರ್ಶನ, ಧರಣಿ ನಡೆಸಲು ತೀರ್ಮಾನಿಸಿತು. ಚಿಕ್ಕಮಗಳೂರು ಶಾಖೆಯನ್ನು ಪುನ್ರ ಸಂಘಟಿಸಿ ಕಾ॥ ಕೆ.ಎಂ.ಅಬ್ದುಲ್‌ಜಬ್ಬಾರ್ ಶಾಖೆಯ ಕಾರ್ಯದರ್ಶಿಯಾಗಿ ನೇಮಿಸಲಾಯಿತು.

ಓದುಗರಲ್ಲಿ ಕ್ಷಮೆ ಕೋರುತ್ತೇವೆ

ತಾಂತ್ರಿಕ ತಪ್ಪಿನಿಂದಾಗಿ 'ಚಿತ್ತರಂಗ'ದ ಕಳೆದ ಸಂಚಿಕೆಯ ಒಳಪುಟಗಳು ಅದಲು ಬದಲಾಗಿವೆ. ಉದಾ: 2 ಇರಬೇಕಾದಲ್ಲಿ 10, 10 ಇರಬೇಕಾದಲ್ಲಿ 2 ಇತ್ಯಾದಿ 2, 3, 4,... 9, 10, 11ರ ಬದಲು 10, 11, 4, 7, 8, 6, 5, 9, 2, 3 ಈ ಕ್ರಮ ದಲ್ಲಿ ಅಚ್ಚಾಗಿದೆ. ಓದುಗರಾದ ಕಿರಿಕಿರಿಗಾಗಿ ಕ್ಷಮೆ ಕೋರುತ್ತೇವೆ.

ಸಾಮೂಹಿಕ ಕ್ರಾಂತಿಕಾರಿ ಪಕ್ಷವಾಗಿ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ೧೩ನೇ ಅಧಿವೇಶನದಲ್ಲಿ ಕಾ|| ಇ.ಎಂ.ಎಸ್.ನಂಬೂದಿರಿಪಾಡ್‌ರು ರಾಜಕೀಯ ಸಂಘಟನಾ ವರದಿಯನ್ನು ಮಂಡಿಸುತ್ತಾ ಈ ಕೆಳಗಿನ ಭಾಷಣವನ್ನು ಮಾಡಿದರು. "ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ಅಣುಯುದ್ಧ ತಪ್ಪಿಸಿ ಮಾನವ ಜನಾಂಗವನ್ನು ಉಳಿಸುವ ಶಾಂತಿ ಚಳುವಳಿ ಅತಿ ಪ್ರಮುಖವಾಗಿದೆ. ಭಾರತ ಸರ್ಕಾರವು ರಾಜೀವ್‌ಗಾಂಧಿ ಕಾಂಗ್ರೆಸ್(ಐ) ನೇತೃತ್ವದಲ್ಲಿ ಲೋಕ ಶಾಂತಿಗಾಗಿ ಸ್ವರ ಕೂಡಿಸುತ್ತದಾದರೂ, ಭಾರತದ ಜನ ಸಮೂಹಗಳು ಶಾಂತಿ ಹೋರಾಟದಲ್ಲಿ ಚಳುವಳಿ ಮಾಡುವುದು ಕಾಂಗ್ರೆಸ್ಸಿಗೆ ಬೇಡವಾಗಿದೆ. ಶಾಂತಿ ಸೌಹಾರ್ದತಾ ಸಂಘಟನೆಯು ಈಗ ರಾಷ್ಟ್ರಮಟ್ಟದಲ್ಲಿ ಎಲ್ಲಾ ಪಕ್ಷಗಳಿಗೆ ಸಮಾನ ಸ್ಥಾನಮಾನ ಕೊಡುವ ಮತ್ತು ಪ್ರಜಾಪ್ರಭುತ್ವ ರೀತಿಯಲ್ಲಿ ನಡೆಸಬೇಕೆನ್ನುವ ಅಭಿಪ್ರಾಯಕ್ಕೆ ಬಂದಿದೆಯಾದರೂ, ಈ ಆಧಾರದಲ್ಲಿ ಕೆಲಸ ನಡೆಯುತ್ತಿರುವುದಾದರೂ, ಇದೇ ರೀತಿಯಲ್ಲಿ ರಾಜ್ಯಗಳ ಮಟ್ಟದಲ್ಲಿ ಕೆಲಸ ಆರಂಭವಾಗಲಿಲ್ಲ. ನಾವು ಎಲ್ಲಾ ರಾಜ್ಯಗಳಲ್ಲೂ ಎಲ್ಲಾ ಸಾಮೂಹಿಕ ಸಂಘಟನೆಗಳ ಜನಸಮೂಹಗಳನ್ನು ಈ ಕಾರ್ಯದಲ್ಲಿ ಇಳಿಸಿ ಭಾರತದಲ್ಲಿ ಶಾಂತಿ ಚಳುವಳಿಯೂ ನಿಜವಾಗಿಯೂ ಯುರೋಪಿಯನ್ ರಾಷ್ಟ್ರಗಳಲ್ಲಿ ನಡೆಯುತ್ತಿರುವಂತೆ ಬೃಹತ್ ಪ್ರಮಾಣದಲ್ಲಿ ನಡೆಯುವುದಕ್ಕೆ ನಮ್ಮ ಪಕ್ಷವು ಎಲ್ಲಾ ಕ್ರಮಗಳನ್ನು ವಹಿಸಬೇಕು.

"ರಾಷ್ಟ್ರೀಯ ಕ್ಷೇತ್ರದಲ್ಲಿ, ನಮ್ಮ ತುರ್ತಿನ ಕಾರ್ಯತಂತ್ರಗಳು ನಮ್ಮ ಕಾರ್ಯಕ್ರಮದ ಜನತಾ ಪ್ರಜಾಪ್ರಭುತ್ವ ರಂಗವನ್ನು ರೂಪೀಕರಿಸುವ ಉದ್ದೇಶಕ್ಕೆ ಅನುಕೂಲವಾಗಿರಬೇಕು. ಕೇರಳದಲ್ಲಿ ಮುಸ್ಲೀಂಲೀಗಿನ ಜತೆ ಚುನಾವಣಾ ಮೈತ್ರಿ ಮಾಡುವ ರಾಜಕೀಯ ಲೈನನ್ನು ಪ್ರತಿಪಾದಿಸುವುದನ್ನು ಕೇರಳದ ಬಹು ಭಾಗದ ಪ್ರತಿನಿಧಿಗಳು ಮತ್ತು ದೇಶದ ಇತರ ಭಾಗಗಳ ಎಲ್ಲಾ ಪ್ರತಿನಿಧಿಗಳು ವಿರೋಧಿಸಿದರು. ೧೨ನೇ ಅಧಿವೇಶನವು "ಚುನಾವಣಾ ಕಾರ್ಯತಂತ್ರ ಮೂಲಕಾರ್ಯ ತಂತ್ರಕ್ಕೆ ಅನುಸಾರವಾಗಿರಬೇಕು" ಎಂದು ತೀರ್ಮಾನಿಸಿತು. ಅಧಿವೇಶನ ಹಾಕಿದ ದಾರಿಯಲ್ಲಿ, ಕೇರಳದಲ್ಲಿ, ಚುನಾವಣೆಗಳನ್ನು ಎದುರಿಸಿದಾಗ "ಉತ್ತಮ ಫಲಿತಾಂಶ" ದೊರಕಿತು. ನಮ್ಮ ಪಕ್ಷಕ್ಕೆ ಎಲ್.ಡಿ.ಎಫ್. ಸರ್ಕಾರ ರಚಿಸಲು ಬೇಕಾದ ಬಹುಮತವು ದೊರೆಯಿತು. ಇದು ನಮ್ಮ ಪಕ್ಷ, ರಾಜೀವ ನೇತೃತ್ವದ ಕಾಂಗ್ರೆಸ್(ಐ)ಯ ಸರ್ವಾಧಿಕಾರಿ ಧೋರಣೆಗಳನ್ನು ಎದುರಿಸಿ ಹೋರಾಡುವಾಗಲೇ ಜಾತೀಯ-ಮತೀಯ ಶಕ್ತಿಗಳನ್ನು ಜನತೆಯಿಂದ ದೂರ ಮಾಡುವ ಕರ್ತವ್ಯವನ್ನು ಪೂರೈಸಬೇಕು" ಎಂಬ ಲೈನನ್ನು ಪೂರ್ತಿಯಾಗಿ ಪುರಸ್ಕರಿಸಿದೆ.

ರಾಜೀವ್‌ಗಾಂಧಿಯ ಸರ್ವಾಧಿಕಾರಿ ಕಾರ್ಯಕ್ರಮಗಳ ವಿರುದ್ಧ ಹೋರಾಡುವಾಗಲೇ ದೇಶದ ಐಕ್ಯತೆ ಮತ್ತು ಸಮಗ್ರತೆಗಾಗಿ ದೃಢವಾದ ಹೋರಾಟ ನಡೆಸಬೇಕೆಂಬ ನಮ್ಮ ಪಕ್ಷವು "ರಾಷ್ಟ್ರಾಧ್ಯಕ್ಷರ ಚುನಾವಣೆಯ ವೇಳೆ" ಕೆಲವೊಂದು ಶಕ್ತಿಗಳು ಬಿ.ಜೆ.ಪಿ.ಯವರ ಸಹಾಯದಿಂದ ಜೈಲ್‌ಸಿಂಗ್‌ರನ್ನು ರಾಷ್ಟ್ರಾಧ್ಯಕ್ಷರನ್ನಾಗಿ ಮಾಡಲು ನಡೆಸಿದ ಕುತಂತ್ರಗಳನ್ನು ದೃಢವಾಗಿ ಸೋಲಿಸಿದೆವು.

"ನಮ್ಮ ಪಕ್ಷದ ಲೈನಿಗೂ ಬಂಡವಾಳ ಶಾಹಿ-ಭೂಮಾಲೀಕ ವಿರೋಧ ಪಕ್ಷಗಳ ನಿಲುವಿಗೂ ಸ್ಪಷ್ಟವಾದ ಭಿನ್ನತೆ ಇದೆ. "ನಮ್ಮ ನಿಲುವೆಯಲ್ಲಿ ಸಾಮ್ರಾಜ್ಯಶಾಹಿ ವಿರೋಧ ಅಂಶವು ಸೇರಿದೆ. ಎಲ್ಲಾ ಎಡ-ಪಕ್ಷಗಳನ್ನೂ ಒಟ್ಟು ಮಾಡಿ ಒಟ್ಟಾಗಿ ನಾವು ಸಾಮ್ರಾಜ್ಯಶಾಹಿ ಶಕ್ತಿಗಳು ನಮ್ಮ ದೇಶವನ್ನು ಛಿದ್ರೀಕರಿಸುವ ದಿಕ್ಕಿನಲ್ಲಿ ನಡೆಸುತ್ತಿರುವ ಚಟುವಟಿಕೆಗಳನ್ನು ದೃಢವಾಗಿ ವಿರೋಧಿಸಬೇಕಾಗಿದೆ. ಬಂಡವಾಳಶಾಹಿ-ಭೂಮಾಲೀಕ ವಿರೋಧ ಪಕ್ಷಗಳು ರಾಜೀವ್‌ಗಾಂಧಿಯನ್ನು ಅಧಿಕಾರದಿಂದ ಇಳಿಸಲು ಇಚ್ಛಿಸುವವರಾದರೂ ಸಾಮ್ರಾಜ್ಯಶಾಹಿಗಳನ್ನು ದಿಟ್ಟವಾಗಿ ಇದಿರಿಸುವ ನಿಲುವೆ ತಾಳುತ್ತಿಲ್ಲ. ಇದೇ ವಿರೋಧ ಪಕ್ಷಗಳ ಬಣದಲ್ಲಿರುವ ಒಂದು ಪ್ರಮುಖ ಭಿನ್ನತೆ.


"ಡಿಸೆಂಬರ್‌ನಲ್ಲಿ ಎಡಪಕ್ಷಗಳ ನೇತೃತ್ವದಲ್ಲಿ ನಡೆದ ಡಿಸೆಂಬರ್ ೯ರ ರ‍್ಯಾಲಿ ಎಡಪಕ್ಷಗಳಿಗೂ ಹಿಂದಿ ಪ್ರದೇಶಗಳಲ್ಲಿ ಜನಸಮೂಹಗಳನ್ನು ಅಣಿನೆರೆಸುವ ಶಕ್ತಿ ಇವೆ ಎಂಬುದನ್ನು ತೋರಿಸಿದೆ. ಮಾರ್ಚ್ ೧೫ರ ಭಾರತ್ ಬಂದ್ ಈ ದಿಸೆಯಲ್ಲಿ ಇನ್ನೊಂದು ಪ್ರಮುಖ ಹೆಜ್ಜೆ. ಬಿ.ಜೆ.ಪಿ. ಮತ್ತು ಕಾಂಗ್ರೆಸ್(ಐ) ಈ ಹೋರಾಟದಲ್ಲಿ ಎಡ ಶಕ್ತಿಗಳಿಗೆ ಜನತೆಯಿಂದ ದೂರ ಮಾಡಲು ಸಾಧ್ಯವಾಗಿತ್ತು. ಜನತಾದಳ ಮತ್ತು ರಾಷ್ಟ್ರೀಯ ರಂಗಗಳ ರಚನೆ-ಬಿ.ಜೆ.ಪಿ.ಯನ್ನು ಹೊರಗಿಟ್ಟು- ನಮ್ಮ ಲೈನಿನ ಜಯ ಎನ್ನಬಹುದು. ಆದರೆ, ಇದರ ಅರ್ಥ ನಮ್ಮ ರಾಜಕೀಯ ಲೈನು ಕೊನೆಯ ವಿಜಯವನ್ನು ಪಡೆದಿದೆ ಎಂದಲ್ಲ. ಪ್ರತಿಯೊಂದು ವಿರೋಧ ಪಕ್ಷದಲ್ಲೂ ಬಿ.ಜೆ.ಪಿ. ಪರ ಮತ್ತು ವಿರೋಧ ಶಕ್ತಿಗಳು ಇವೆ. ಆದ್ದರಿಂದ ನಾವು ನಮ್ಮ ರಾಜಕೀಯ ಲೈನಿಗಾಗಿ ಹೋರಾಟವನ್ನು ಇನ್ನೂ ವಿಶಾಲವಾಗಿ ನಡೆಸಬೇಕಾಗಿದೆ.


"ನಾವು ನಡೆಸಿದ ರಾಜಕೀಯ ಹೋರಾಟಗಳ ಫಲವಾಗಿ, ಜನತೆಯ ಎದುರಿಸುತ್ತಿರುವ ಸಮಸ್ಯೆಗಳಿಗಾಗಿ ಸತತವಾಗಿ ನಡೆಸಿದ ಹೋರಾಟಗಳ ಫಲವಾಗಿ ಹಾಗೂ ಎಲ್ಲಾ ಸಂದರ್ಭಗಳಲ್ಲಿ ರಾಷ್ಟ್ರದ ಸಮಗ್ರತೆ ಮತ್ತು ಐಕ್ಯತೆಗಾಗಿ ನಡೆಸಿದ ಹೋರಾಟಗಳ ಫಲವಾಗಿ, ನಮ್ಮ ಪಕ್ಷದ ಸ್ಥಾನಮಾನ ದೇಶದ ಜನ ಸಮೂಹಗಳ ಮಧ್ಯೆ ಹಾಗೂ ರಾಷ್ಟ್ರೀಯ ಸೌಹಾರ್ದ ಪಕ್ಷಗಳ ನಡುವೆ ಹೆಚ್ಚಾಗಿದೆ. ಆದರೆ ಅದೇ ವೇಳೆ, ಈ ಸ್ಥಾನಮಾನ ಮತ್ತು ಪ್ರತಿಷ್ಠೆಗೆ ಅನುಗುಣವಾಗಿ ನಮ್ಮ ಪಕ್ಷವು ಇನ್ನೂ ದೇಶದ ಹೆಚ್ಚಿನ ಭಾಗಗಳಲ್ಲಿ ಸಾಮೂಹಿಕ ಕ್ರಾಂತಿಕಾರಿ ಪಕ್ಷವಾಗಿ ಬೆಳೆದು ಬರಲಿಲ್ಲ.

ಪಕ್ಷದ ಬೆಳವಣಿಗೆ ಸಾಮೂಹಿಕ ಸಂಘಟನೆಗಳ ಬೆಳವಣಿಗೆಗಿಂತ ಹಿಂದೆ ಬಿದ್ದಿದೆ.

ಸಾಕ್ಷಿಯಾದ ಅಂದಾಜು ಪ್ರಕಾರ ಹಲವಾರು ತೀರ್ಮಾನಗಳನ್ನು ನಾವು ಜಾರಿಗೆ ತಂದಿದ್ದೇವೆಯಾದರೂ, ಇನ್ನೂ ಹಲವಾರು ತೀರ್ಮಾನಗಳನ್ನು ಜಾರಿ ಮಾಡಲು ಸಾಧ್ಯವಾಗಲಿಲ್ಲ.

"ಆದಕಾರಣ, ನಮ್ಮ ಪಕ್ಷದ ಕೇಂದ್ರ ಸಮಿತಿಯ ಚುನಾವಣೆಗಳು ನಡೆದ ನಂತರ ಪುನಃ ಪಾರ್ಟಿ ಪ್ಲೀನಂ ನಡೆಸಬೇಕೆಂದು ಅಭಿಪ್ರಾಯ ಮೂಡಿದೆ. ಅದನ್ನು ನೀವು ಅನುಮೋದಿಸುವಿರಿ ಎಂದು ನಾವು ನಿರೀಕ್ಷಿಸಿದ್ದೇವೆ" "ಈಗ ಸದ್ಯಕ್ಕೆ ಸಂಘಟನಾ ಕೆಲಸಗಳನ್ನು ಕೇಂದ್ರದಲ್ಲಿ ನಡೆಸಿಕೊಂಡು ಹೋಗಲು ಅನುಕೂಲವಾಗುವಂತೆ, ಕೇಂದ್ರ ಸೆಕ್ರೆಟಾರಿಯೇಟ್‌ನ್ನು ಆರಿಸುವ ಸೂಚನೆಯನ್ನು ಅಧಿವೇಶನದ ಮುಂದೆ ಇರಿಸುತ್ತೇವೆ".





ರಾಜ್ಯವಾರು ಪಕ್ಷದ ಮತ್ತು ಸಾಮೂಹಿಕ ಸಂಘಟನೆಗಳ ಸದಸ್ಯಸತ್ವ

ಕಾರ್ಮಿಕ - ಸಿ.ಐ.ಟಿ.ಯು., ರೈತ - ಅಖಿಲಭಾರತ ಕಿಸಾನ್ ಸಭಾ, ಕೃಷಿಕೂಲಿಗಾರ- ಎ.ಐ.ಎ.ಡಬ್ಲ್ಯು.ಯು, ಯುವಜನ - ಡಿ.ವೈ.ಎಫ್.ಐ., ವಿದ್ಯಾರ್ಥಿ - ಎಸ್. ಎಫ್. ಐ , ಮಹಿಳಾ - ಎ.ಐ.ಡಿ.ಡಬ್ಲ್ಯು.ಎ ಸಿ.ಐ.ಟಿ.ಯು. ಅಂಕಿ. ಸಂಖ್ಯೆ 1986ರದ್ದು, ಉಳಿದುದೆಲ್ಲಾ 1987ರದ್ದು.

ರಾಜ್ಯ	ಕಾರ್ಮಿಕ	ರೈತ	ಕೃಷಿಕೂಲಿಗಾರ	ಯುವಜನ	ವಿದ್ಯಾರ್ಥಿ	ಮಹಿಳಾ	ಪಕ್ಷ
ಕೇರಳ	3.81 ಲಕ್ಷ	8.83 ಲಕ್ಷ	6.71 ಲಕ್ಷ	18.43 ಲಕ್ಷ	4.74 ಲಕ್ಷ	4.4 ಲಕ್ಷ	1.79 ಲಕ್ಷ
ಪ.ಬಂಗಾಳ	7.02 ಲಕ್ಷ	78.96 ಲಕ್ಷ	14.58	23.29 ಲಕ್ಷ	5.93 ಲಕ್ಷ	14.58 ಲಕ್ಷ	1.55 ಲಕ್ಷ
ತಮಿಳುನಾಡು	1.20 ಲಕ್ಷ	2.00 ಲಕ್ಷ	1.00 ಲಕ್ಷ	1.44 ಲಕ್ಷ	33 ಸಾವಿರ	84 ಸಾವಿರ	33.1 ಸಾವಿರ
ಆಂಧ್ರಪ್ರದೇಶ	65.8 ಸಾವಿರ	2.50 ಲಕ್ಷ	4.49 ಲಕ್ಷ	2.00 ಲಕ್ಷ	1.09 ಲಕ್ಷ	1.53 ಲಕ್ಷ	23.3 ಸಾವಿರ
ತ್ರಿಪುರಾ	17.6 ಸಾವಿರ	20 ಸಾವಿರ	35 ಸಾವಿರ	1.12 ಲಕ್ಷ	51.6 ಸಾವಿರ	93 ಸಾವಿರ	14.3 ಸಾವಿರ
ಬಿಹಾರ	31.9 ಸಾವಿರ	2.80 ಲಕ್ಷ	37 ಸಾವಿರ	66.6 ಸಾವಿರ	45.3 ಸಾವಿರ	6 ಸಾವಿರ	13.2 ಸಾವಿರ
ಅಸ್ಸಾಂ	28.7 ಸಾವಿರ	2.52 ಲಕ್ಷ	-	59.3 ಸಾವಿರ	56.2 ಸಾವಿರ	44.9 ಸಾವಿರ	10.7 ಸಾವಿರ
ಪಂಜಾಬ್	24.8 ಸಾವಿರ	1.27 ಲಕ್ಷ	66 ಸಾವಿರ	29.6 ಸಾವಿರ	9.9 ಸಾವಿರ	4 ಸಾವಿರ	8.9 ಸಾವಿರ
ಉತ್ತರ ಪ್ರದೇಶ	10.8 ಸಾವಿರ	1.70 ಲಕ್ಷ	44 ಸಾವಿರ	30.9 ಸಾವಿರ	9.3 ಸಾವಿರ	-	7.32 ಸಾವಿರ
ಮಹಾರಾಷ್ಟ್ರ	32.6 ಸಾವಿರ	732.8 ಸಾವಿರ	28.1 ಸಾವಿರ	31.2 ಸಾವಿರ	52.9 ಸಾವಿರ	24.3 ಸಾವಿರ	4.8 ಸಾವಿರ
ಕರ್ನಾಟಕ	49.4 ಸಾವಿರ	1.40 ಲಕ್ಷ	39.8 ಸಾವಿರ	15,9 ಸಾವಿರ	13.7 ಸಾವಿರ	-	3.5 ಸಾವಿರ
ಒರಿಸ್ಸಾ	42.5 ಸಾವಿರ	34 ಸಾವಿರ	13.5 ಸಾವಿರ	14.2 ಸಾವಿರ	12 ಸಾವಿರ	3.9 ಸಾವಿರ	3.3 ಸಾವಿರ
ರಾಜಸ್ಥಾನ್	14.8 ಸಾವಿರ	60 ಸಾವಿರ	-	27.4 ಸಾವಿರ	21.3 ಸಾವಿರ	2.2ಸಾವಿರ	2.9 ಸಾವಿರ
ಗುಜರಾತ್	18.9 ಸಾವಿರ	15.2 ಸಾವಿರ	-	1 ಸಾವಿರ	10.1 ಸಾವಿರ	7 ಸಾವಿರ	1.3 ಸಾವಿರ
ಹರ್ಯಾಣ	4.23 ಸಾವಿರ	11.5 ಸಾವಿರ	-	19.6 ಸಾವಿರ	4.87 ಸಾವಿರ	2.53 ಸಾವಿರ	9.20 ಲಕ್ಷ
ಹಿಮಾಚಲ ಪ್ರದೇಶ	5,43 ಸಾವಿರ	14.0 ಸಾವಿರ	-	10.1 ಸಾವಿರ	10.8 ಸಾವಿರ	888 ಸಾವಿರ	860
ದೆಹಲಿ	32.8 ಸಾವಿರ	-	-	9.6 ಸಾವಿರ	1.6 ಸಾವಿರ	9.2 ಸಾವಿರ	840
ಮಧ್ಯಪ್ರದೇಶ	16.6 ಸಾವಿರ	-	-	6.4 ಸಾವಿರ	18.5 ಸಾವಿರ	2.4 ಸಾವಿರ	720
ಜಮ್ಮುಕಾಶ್ಮೀರ	-	15 ಸಾವಿರ	-	220	100		577
ಗೋವ	2273-	-	-		1817		70
ಮಣಿಪುರ	-ಸಿಕ್ಕಿಲ್ಲ	1015	1970		157	-	- (?)
ಅಂಡಮಾನ್	897	-	-	-			
ಕೇಂದ್ರ ಸಮಿತಿ					-	-	103
ಸಿಬ್ಬಂದಿ	-	-	-	-	-	-	101
ಒಟ್ಟು	16.13	1.05 ಕೋಟಿ	14.28 ಲಕ್ಷ	49.51 ಲಕ್ಷ	15.29 ಲಕ್ಷ	22.72 ಲಕ್ಷ	4.65 ಲಕ್ಷ

ಬಿರುಸಿನ ಚುನಾವಣಾ ಸಮರ

ನೀವು ಈ ಲೇಖನವನ್ನು ಓದುವ ಹೊತ್ತಿಗಾಗಲೇ ತಮಿಳುನಾಡಿನ ವಿಧಾನ ಸಭಾ ಚುನಾವಣೆಗಳು ಮುಗಿದಿರುತ್ತದೆ. ಓಟುಗಳ ಎಣಿಕೆ ಕಾರ್ಯವು ಪ್ರಾರಂಭಗೊಂಡಿರುತ್ತದೆ. ತಮಿಳುನಾಡಿನ ಫಲಿತಾಂಶವನ್ನು ಇಡೀ ದೇಶ ಕಾತುರದಿಂದ ಎದುರು ನೋಡುತ್ತಿದೆ. 20 ವರ್ಷಗಳ ಹಿಂದೆ ಕಳೆದುಕೊಂಡ ತಮ್ಮ ಅಧಿಕಾರವನ್ನು ಮತ್ತೆ ಪಡೆಯಲು ಕಾಂಗ್ರೆಸ್(ಐ) ಭಗಿರಥ ಪ್ರಯತ್ನ ನಡೆಸುತ್ತಿದೆ. ಜನತೆಯ ವಿರೋಧಿ ಕಾಂಗ್ರೆಸ್(ಐ)ನ್ನು ತಮಿಳುನಾಡಿನಲ್ಲಿ ತಲೆ ಎತ್ತದಂತೆ ಮಾಡಲು ಡಿ.ಎಂ.ಕೆ. ಮತ್ತು, ಜನತಾದಳದೊಂದಿಗೆ ಸ್ಥಾನಗಳ ಹೊಂದಾಣಿಕೆ ಮಾಡಿಕೊಂಡು ಸಿ.ಪಿ.ಐ.(ಎಂ) ಸೆಣಸುತ್ತಿದೆ.

ಎಂ.ಜಿ.ಆರ್. ಸ್ಥಾಪಿಸಿದ ಎ.ಐ.ಎ.ಡಿ.ಎಂ.ಕೆ.ಯಲ್ಲಿ ಒಡಕು ಉಂಟಾಗಿರುವ ಪರಿಸ್ಥಿತಿಯಲ್ಲಿ ಈ ಚುನಾವಣೆ ನಡೆಯುತ್ತಿದೆ. ಈ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ರಂಗಗಳು ಮತ್ತು ಆ ರಂಗಗಳ ಪಕ್ಷಗಳ ವಿವರವನ್ನು ಇಲ್ಲಿ ಕೊಡಲಾಗಿದೆ.

ಒಟ್ಟು ಸ್ಥಾನಗಳು -234

ಡಿ.ಎಂ.ಕೆ. ರಂಗ

ಡಿ.ಎಂ.ಕೆ.	-	198
ಸಿ.ಪಿ.ಐ.(ಎಂ)	-	21
ಜನತಾದಳ	-	10
ಲತೀಫ್ ಮುಸ್ಲಿಂ ಲೀಗ್	-	4
ಇತರೆ	-	1

ಕಾಂಗ್ರೆಸ್(ಐ) ರಂಗ

ಕಾಂಗ್ರೆಸ್(ಐ)	-	209
ಐ.ಸಿ.ಪಿ (ಕಲ್ಯಾಣಸುಂದರಂ)	-	10
ಮುಸ್ಲಿಂ ಲೀಗ್	-	8
ಇತರೆ	-	7

ಎ.ಐ.ಎ.ಡಿ.ಎಂ.ಕೆ. (ಜಾನಕಿ ಗುಂಪು)ರಂಗ

ಎ.ಐ.ಎ.ಡಿ.ಎಂ.ಕೆ	-	177
ಟಿ.ಎಂ.ಎಂ. (ಶಿವಾಜಿಗಣೇಶನ್)	-	50
ಫಾರ್ವಡ್ ಬ್ಲಾಕ್	-	5
ಇತರೆ	-	2

ಎ.ಐ.ಎ.ಡಿ.ಎಂ.ಕೆ.(ಜಯಲಲಿತ ಗುಂಪು) ರಂಗ

ಎ.ಐ.ಎ.ಡಿ.ಎಂ.ಕೆ.	-	201
ಜನತಾ (ವಿಜಯ ರಾಘವನ್ ಗುಂಪು)	-	21
ಸಿ.ಪಿ.ಐ.	-	12

ಮೇಲ್ಕಂಡ ಪಕ್ಷಗಳಲ್ಲದೆ ಕೆಲವು ಚಿಕ್ಕ ಪಕ್ಷಗಳು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಸ್ವತಂತ್ರ ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದಾರೆ.

ತಮಿಳುನಾಡಿನ ನಗರಗಳ, ಪಟ್ಟಣಗಳ, ಗ್ರಾಮಗಳ ಎಲ್ಲಾ ಗೋಡೆಗಳನ್ನು ರಾಜಕೀಯ ಪಕ್ಷಗಳು ಆಕ್ರಮಿಸಿಕೊಂಡು ತಮ್ಮ ತಮ್ಮ ಚುನಾವಣೆ ಚಿಹ್ನೆಗಳನ್ನು ಘೋಷಣೆಗಳನ್ನು ಆಕರ್ಷಿತವಾಗಿ ಬರೆದಿವೆ. ಬಹಳಷ್ಟು ಕ್ಷೇತ್ರಗಳಲ್ಲಿ ಬೆಲೆ ಬಾಳುವ ಎನಾಮೆಲ್ ಪೈಂಟುಗಳಲ್ಲೇ ಬರೆಯಲಾಗಿದೆ. ಪ್ರಚಾರಕ್ಕಾಗಿ ಬಂಡವಾಳಶಾಹಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಪಾರ ಹಣ ಖರ್ಚು ಮಾಡಲಾಗುತ್ತಿದೆ. ಬ್ಯಾನರುಗಳಿಗೆ, ಧ್ವಜಗಳಿಗೆ, ತೋರಣಗಳಿಗೆ ಬೃಹತ್ ಕಟೌಟ್‌ಗಳಿಗಾಗಿ ಅಭ್ಯರ್ಥಿಗಳು ತುಂಬಾ ಹಣ ನೀರಿನಂತೆ ಖರ್ಚು ಮಾಡುತ್ತಿದ್ದಾರೆ. ಕಾಂಗ್ರೆಸ್(ಐ)ಪಕ್ಷ ವಿಧವಿಧವಾದ ಪೋಸ್ಟರ್‌ಗಳನ್ನು ಆಫ್‌ಸೆಟ್‌ನಲ್ಲಿ ಮುದ್ರಿಸಿ ರಾಜ್ಯಾದ್ಯಂತ ವ್ಯಾಪಕವಾಗಿ ಪ್ರಚಾರ ಮಾಡಿದೆ. ಇತರ ಪಕ್ಷಗಳು ಕೂಡ ಕಾಂಗ್ರೆಸ್(ಐ)ನು ಮೀರಿಸಲಾಗದಿದ್ದರೂ ಪ್ರಚಾರಕ್ಕಾಗಿ ಹಣವನ್ನು ಹೇರಳವಾಗಿ ಖರ್ಚು ಮಾಡುತ್ತಿದೆ.

ಸಿ.ಪಿ.ಐ.(ಎಂ) ಮತ್ತು ಸ್ವಲ್ಪ ಮಟ್ಟಿಗೆ ಡಿ.ಎಂ.ಕೆ. ಬಿಟ್ಟರೆ ಉಳಿದೆಲ್ಲ ಪಕ್ಷಗಳು ಚುನಾವಣಾ ಪ್ರಚಾರಕ್ಕಾಗಿ ಜನರನ್ನು ಬಾಡಿಗೆಗೆ ನೇಮಿಸಿಕೊಂಡಿವೆ.

ಸಿ.ಪಿ.ಐ.(ಎಂ) ಪಕ್ಷವು ತಾನು ಸ್ಪರ್ಧಿಸುತ್ತಿರುವ ಕ್ಷೇತ್ರಗಳಲ್ಲಿ ಇತರ ಎಲ್ಲಾ ಪಕ್ಷಗಳಿಗಿಂತ ಹೆಚ್ಚು ವ್ಯಾಪಕವಾಗಿ ಗೋಡೆಬರಹ ಮಾಡಿದೆ. ಕಾರ್ಯಕರ್ತರು ತಮ್ಮ ಸ್ವಂತ ಹಣವನ್ನು, ದುಡಿಮೆಯನ್ನು ಉಪಯೋಗಿಸಿ ತಮ್ಮ ಅಭ್ಯರ್ಥಿಗಳ ಜಯಕ್ಕಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ.

ಸಿಪಿ.ಐ.(ಎಂ) ತನ್ನ ಪ್ರಚಾರದಲ್ಲಿ ಮತ್ತು ಜನತೆಯೊಡನೆ ನೇರ ಸಂವಾದ ನಡೆಸುವಾಗ ವಿಧಾನಸಭೆಯಲ್ಲಿ ತಮ್ಮ ಪಕ್ಷದ ಶಾಸಕರು ದುಡಿಯುವ ವರ್ಗದ ಪರವಾಗಿ ಹೇಗೆ ಹೋರಾಟ ನಡೆಸಿದರೆಂಬುದನ್ನು ವಿವರಿಸುತ್ತಿದೆ.

ಸಿ.ಪಿ.ಐ.(ಎಂ) ತನ್ನ ರಂಗದ ಇತರ ಪಕ್ಷಗಳಿಂದ ಹಣದ ಸಹಾಯ ಪಡೆಯದೆ ತಾನು ಸ್ಪರ್ಧಿಸದಿರುವ ಕ್ಷೇತ್ರಗಳಲ್ಲಿ ಪ್ರಚಾರ ಕಾರ್ಯ ನಡೆಸುತ್ತಿದೆ. ಅಲ್ಲದೆ ತಾನು ಸ್ಪರ್ಧಿಸುತ್ತಿರುವ ಕ್ಷೇತ್ರದಲ್ಲಿ ಕೂಡ ತನ್ನ ಸ್ವಂತ ಹಣ ಮತ್ತು ಸ್ವಂತ ಶಕ್ತಿಯಿಂದ ಚುನಾವಣೆಯಲ್ಲಿ ಪ್ರಚಾರ ನಡೆಸುತ್ತಿದೆ.

ಚುನಾವಣೆಯ ಸಮಯದಲ್ಲಿ ಎಲ್ಲಾ ಪಕ್ಷಗಳು, ಹಣ ಮತ್ತು ಸಾರಾಯಿಯನ್ನು ಮತಗಳಿಗೆ ವಿನಿಮಯಿಸಿಕೊಳ್ಳುತ್ತದೆ. ಆದರೆ ಸಿ.ಪಿ.ಐ.(ಎಂ) ಇವುಗಳನ್ನು ತಿರಸ್ಕರಿಸಿ ಜನತೆಯಿಂದಲೇ ಹಣ ಸಂಗ್ರಹಿಸಿದ ರಂಗದ ಇತರ ಪಕ್ಷಗಳಿಗಾಗಿ ಕೆಲಸ ಮಾಡುತ್ತಿರುವುದು ಎಲ್ಲರಿಗೂ ಆಶ್ಚರ್ಯವನ್ನುಂಟು ಮಾಡಿರುವುದೇ ಅಲ್ಲದೆ ಸಿ.ಪಿ.ಐ.(ಎಂ)ನ ಬಗ್ಗೆ ಜನತೆಯಲ್ಲೂ ಮತ್ತು ಇತರ ರಾಜಕೀಯ ಪಕ್ಷಗಳಲ್ಲೂ ಗೌರವ ಭಾವನೆ ಉಂಟು ಮಾಡಿದೆ.

ಎಲ್ಲಾ ಪಕ್ಷಗಳು ಆಡಿಯೋ ಕ್ಯಾಸೆಟುಗಳ ಮೂಲಕ ಹಾಡುಗಳನ್ನು ಬಿತ್ತರಿಸುತ್ತಿವೆ.

ಸಿ.ಪಿ.ಐ.(ಎಂ) 11 ಹಾಡುಗಳು ಮತ್ತು 1 ಪರಿಚಯ ಭಾಷಣವಿರುವ ಕ್ಯಾಸೆಟ್ಟನ್ನು ಬಿಡುಗಡೆ ಮಾಡಿದೆ. ಮದ್ರಾಸ್ ಜಿಲ್ಲಾ ಸಮಿತಿ ಮತ್ತೊಂದು ಕ್ಯಾಸೆಟ್ಟನ್ನು ಕಾ. ಜ್ಯೋತಿಬಸು ಅವರಿಂದ ಬಿಡುಗಡೆ ಮಾಡಿಸಿದೆ.

ವಿಡಿಯೋವನ್ನು ಉಪಯೋಗಿಸುವುದರಲ್ಲೂ ಎಲ್ಲಾ ಪ್ರಮುಖ ಪಕ್ಷಗಳು ಸ್ಪರ್ಧೆ ನಡೆಸಿವೆ.

ಕಾಂಗ್ರೆಸ್(ಐ) 11 ವಿಡಿಯೋ ವ್ಯಾನುಗಳನ್ನು ರಾಜ್ಯಾದ್ಯಂತ ಪ್ರಚಾರಕ್ಕಾಗಿ ಬಳಸಿಕೊಂಡಿದೆ. ತನ್ನ ಹಣದ ಬಲವನ್ನು ಕಾಂಗ್ರೆಸ್(ಐ) ರಾಜ್ಯದ ಜನತೆ ಎದುರು ಮತ್ತೊಮ್ಮೆ ಪ್ರದರ್ಶಿಸಿದೆ.

ನಮ್ಮ ಪಕ್ಷವು ಸಹ ವಿಡಿಯೋ ಕ್ಯಾಸೆಟ್ಟನ್ನು ಬಿಡುಗಡೆ ಮಾಡಿದೆ. ಅದರಲ್ಲಿ ಕಾಂಗ್ರೆಸ್(ಐ)ನ ಸಂದರ್ಭಸಾಧಕ ನಡವಳಿಕೆಗಳನ್ನು, ದೇಶದ ಐಕ್ಯತೆಗೆ ಕೊಡಲಿ ಏಟು ಹಾಕುತ್ತಿರುವ ಅದರ ನೀತಿಗಳನ್ನು, ಮತೀಯ, ಛಿದ್ರಕಾರಿ ಶಕ್ತಿಗಳೊಂದಿಗೆ ಸೇರಿಕೊಂಡು ದೇಶದಲ್ಲಿ ಅಶಾಂತಿಯನ್ನು ಹರಡುತ್ತಿರುವುದನ್ನು ಮತ್ತು ಜನತೆಯ, ಕಾರ್ಮಿಕರ, ರೈತರ, ವಿದ್ಯಾರ್ಥಿಗಳ ಹಿತಾಸಕ್ತಿಗೆ ಎದುರಾಗಿ ಕಾಂಗ್ರೆಸ್(ಐ) ಪಕ್ಷ ವರ್ತಿಸುತ್ತಿರುವುದನ್ನು ವಿಡಿಯೋದಲ್ಲಿ ಚಿತ್ರಿಸಲಾಗಿದೆ. ಕಾಂಗ್ರೆಸ್(ಐ)ನ್ನು ನಮ್ಮ ದೇಶಕ್ಕೆ ಹಿಡಿದಿರುವ ದೆವ್ವವನ್ನಾಗಿ ಚಿತ್ರಿಸಲಾಗಿದೆ.

ಇವಲ್ಲದೆ ಅಸಂಖ್ಯಾತ ಬಹಿರಂಗ ಸಭೆಗಳನ್ನು ನಮ್ಮ ಪಕ್ಷ ವ್ಯವಸ್ಥೆಗೊಳಿಸಿದೆ. ಪಕ್ಷದ ಮುಖಂಡರುಗಳಾದ ಕಾರ್ಯದರ್ಶಿ ಕಾ.ಇ.ಎಂ.ಎಸ್., ರಣದೀವೆ, ಜ್ಯೋತಿಬಸು, ನೃಪೇನ್‌ಚಕ್ರವರ್ತಿ, ಇ.ಕೆ. ನಾಯನಾರ್ ಮುಂತಾದವರು ಈ ಸಭೆಗಳಲ್ಲಿ ಭಾಗವಹಿಸಿದ್ದಾರೆ.

ಸಾಮಾನ್ಯವಾಗಿ ಪಕ್ಷಬೇಧವಿಲ್ಲದೆ ಜನತೆ ಎಲ್ಲಾ ಪಕ್ಷಗಳ ಮುಖಂಡರುಗಳ ಭಾಷಣಗಳಿಗೂ ಅಧಿಕ ಸಂಖ್ಯೆಯಲ್ಲಿ ಜಮಾಯಿಸುತ್ತಿದ್ದಾರೆ.

ಕಾಂಗ್ರೆಸ್(ಐ) ಪಕ್ಷದವರು ಸಿ.ಪಿ.ಐ.(ಎಂ) ಪಕ್ಷವನ್ನು ಗುರಿಯಿಟ್ಟು ಹಲ್ಲೆ ನಡೆಸುತ್ತಿದ್ದಾರೆ. ಹಲವಾರು ಕಾರ್ಯಕರ್ತರನ್ನು ಹೊಡೆದು ಹಿಂಸಿಸಿದ್ದಾರೆ. ಮುಯಿಲಾಡುತುರೈ, ಗೂಡಲೂರು, ಪದ್ಮನಾಭಪುರಂ, ತಿರುವೆಟ್ಟಾರುಗಳಲ್ಲಿ ಸಿ.ಪಿ.ಐ.(ಎಂ) ಕಛೇರಿಗಳನ್ನು ಕಾಂಗ್ರೆ

ಪುಟ 7 ಕ್ಕೆ

ಮಹಾಧಿವೇಶನಕ್ಕೆ ಮೊದಲು
ಸಿ.ಪಿ.ಐ(ಎಂ) ರಾಜ್ಯಸಮ್ಮೇಳನಗಳು

ಹದಿಮೂರನೇ ಮಹಾಧಿವೇಶನಕ್ಕೆ ಪೂರ್ವಸಿದ್ಧತೆಯಾಗಿ ನಡೆದ ಪಕ್ಷದ ವಿವಿಧ ರಾಜ್ಯಘಟಕಗಳ ಸಮ್ಮೇಳನಗಳು ಮತ್ತು ಈ ಸಮ್ಮೇಳನಗಳು ಆರಿಸಿದ ಹೊಸ ಮುಖಂಡತ್ವ.

ರಾಜ್ಯ	ಸಮ್ಮೇಳನ ಸಂಖ್ಯೆ	ದಿನಾಂಕ	ಸ್ಥಳ	ಹೊಸ ರಾಜ್ಯಸಮಿತಿಯ ಸದಸ್ಯ ಸಂಖ್ಯೆ	ರಾಜ್ಯಕಾರ್ಯದರ್ಶಿ
ಕೇರಳ	13	ನ. 17-20	ಆಲೆಪ್ಪಿ	73	ವಿ.ಎಸ್ ಅಚ್ಯುತಾನಂದನ್
ಪ.ಬಂಗಾಳ	16	ಡಿ. 3-7	ಬಿಧಾನನಗರ	99	ಸರೋಜ್‌ಮುಖರ್ಜಿ
ತಮಿಳುನಾಡು	13	ನ. 23-27	ಮದ್ರಾಸ್	72	ಎ. ನಲ್ಲಶಿವನ್
ಆಂಧ್ರಪ್ರದೇಶ	16	ನ. 4-7	ವಿಜಯವಾಡಾ	58	ಎಲ್.ಬಿ. ಗಂಗಾಧರರಾವ್
ತ್ರಿಪುರಾ	13	ಅಕ್ಟೋ.27-30	ಅಗರ್ತಲಾ	49	ದಶರಥ ದೇಬ್
ಬಿಹಾರ	13	ಆ. 8-10	ಬೇಗುಸರ್ಾ		ಗಣೇಶ ಶಂಕರ ವಿದ್ಯಾರ್ಥಿ
ಅಸ್ಸಾಂ	13	ಅಕ್ಟೋ.31-ನ.3	ಸಿಲ್ಚಾಟ್	33	ನಂದೇಶ್ವರತಾಲ್ಲೂಕ್‌ದಾರ್
ಪಂಜಾಬ್	13	ನ. 29-ಡಿ.1	ಸಂಗ್ರೂರ್	31	ಗರುಚರಣ್‌ಸಿಂಗ್ ರಂಧಾವಾ
ಉತ್ತರಪ್ರದೇಶ	13	ಅಕ್ಟೋ. 26-28	ಇಠಾ	27	ರಾಂ ಸುಮೇರ್‌ಯಾದವ್
ಮಹಾರಾಷ್ಟ್ರ	13	ಅಕ್ಟೋ. 22-24	ಪುಣೆ	33	ಪ್ರಭಾಕರ್ ಸಾಂಯುಗಿರಿ
ಕರ್ನಾಟಕ	13	ನ. 27-30	ಬೆಂಗಳೂರು	28	ಪಿ.ರಾಮಚಂದ್ರರಾವ್
ಒರಿಸ್ಸಾ	12	ನ.12-14	ಭುವನೇಶ್ವರ	34	ಶಿವಾಜಿ ಪಟ್ನಾಕ್
ರಾಜಸ್ಥಾನ	13	ನ.4-6	ಅಲ್ವಾರ್	25	ಹರಿರಾಂ ಚೌಹಾಣ್
ಗುಜರಾತ	13	ನ.14-16	ಭಾವನಗರ	17	ರಾಠೋರ್‌ಭಾ ಶಹಾ
ಹರ್ಯಾಣ	6	ಅಕ್ಟೋ. 14-16	ಜಿಂದ್	21	ಆರ್.ಎಸ್.ಹುದಾ
ಹಿಮಾಚಲ ಪ್ರದೇಶ	7	ಅಕ್ಟೋ.10-11	ಶಿಮ್ಲಾ	21	ತಾರಾಚಂದ್
ದೆಹಲಿ	6	ಅಕ್ಟೋ.8-10	ನವದೆಹಲಿ	21	ಜೋಗೆಂದ್ರ ಶರ್ಮ
ಮಧ್ಯಪ್ರದೇಶ	6	ಅಕ್ಟೋ.16-18	ಮೋರ್ಕೆನಾ	19	ಮೋತೀಲಾಲ್ ಶರ್ಮಾ
ಜಮ್ಮು-ಕಾಶ್ಮೀರ	3	ಸಪ್ಟಂ.3-4	ಕೋಕರ್‌ನಾಗ್	11	ಮಹಮ್ಮದ್ ಯೂಸುಫ್ ತರಿಗಾಮಿ
ಮಣಿಪುರ	9	ನ.11-13	ಇಂಫಾಲ್	11	ಕ್ಷೇತ್ರಿ ಮಾಯೂಮಾಮ್ ಸಂತಾ
ಅಂಡಮಾನ್	2	ಅಕ್ಟೋ.29-30	ಪೋರ್ಟ್‌ಬ್ಲೇರ್	18	ಎಸ್.ವಾಸುದೇವನ್
ಗೋವಾ		ಅಕ್ಟೋ.16	ವಾಸ್ಕೋ-ಡ-ಗಾಮ	9	ಸೀತಾರಾಂ ಮಾಂಡ್ರೇಕರ್

ಕರ್ನಾಟಕದ ಜನ ಸೇವೆಯಲ್ಲಿ ಅರ್ಥಪೂರ್ಣ ಆರುವರ್ಷಗಳು

ಕರ್ನಾಟಕ ಸರ್ಕಾರವು ಕಳೆದ ಆರು ವರ್ಷಗಳಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣಕ್ಕಾಗಿ ಸುಮಾರು 1,984 ಕೋಟಿ ರೂ.ಗಳನ್ನು ವೆಚ್ಚ ಮಾಡಿದೆ. ಇದೇ ಅಲ್ಲದೆ ಸುಮಾರು 70 ಲಕ್ಷ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ ಹಾಗೂ ಸಮವಸ್ತ್ರ ಪೂರೈಕೆ, ಎಲ್ಲಾ ಮಟ್ಟದಲ್ಲಿ ವಿದ್ಯಾರ್ಥಿವೇತನಗಳು, 1987-88ರಲ್ಲಿ 18 ಪ್ರಥಮ ದರ್ಜೆ ಕಾಲೇಜುಗಳ ಸ್ಥಾಪನೆ, ಹಾಗೂ ವಯಸ್ಕರ ಶಿಕ್ಷಣದಲ್ಲಿ ಸಾಧಿಸಲಾಗಿದೆ. ಶೀಘ್ರ ಪ್ರಗತಿಯತ್ತ ಹೆಜ್ಜೆಯಿಡುತ್ತಿರುವ ಹೊಸ ಕರ್ನಾಟಕದಲ್ಲಿ ಹೆಚ್ಚು, ಹೆಚ್ಚು ಮಕ್ಕಳು ಉಜ್ವಲ ಭವಿಷ್ಯದೆಡೆ ಮುನ್ನಡೆ ಸಾಗುತ್ತಿದ್ದಾರೆ.

ರೈತರುಗಳ ಆದಾಯ 1983ರಲ್ಲಿದ್ದುದಕ್ಕಿಂತ ಈಗ ಎರಡರಷ್ಟು ಹೆಚ್ಚಾಗಿದೆ. ಇದಕ್ಕೆ ಸರ್ಕಾರ ನೀಡಿರುವ ಕೊಡುಗೆಗಳಾದ ತೆರಿಗೆ ರಿಯಾಯಿತಿ, ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲಗಳು ಕಾರಣವಾಗಿವೆ. ಇಂದು ಸಹಕಾರಿ ಸಂಘಗಳ ಮೂಲಕ ಸಾಲ ಪಡೆದು ಕೇವಲ ಶೇ. 10ರಿಂದ 15ರಷ್ಟು ಬಡ್ಡಿ ಕೊಡುವಂತಾಗಿ, ಸಾಲದ ಕಂತುಗಳನ್ನು ಕ್ರಮವರಿತು ಪಾವತಿ ಮಾಡಿದಲ್ಲಿ ಶೇ. 7ರಷ್ಟು ಬಡ್ಡಿ ಮಾತ್ರ. ಉಳಿದ ಭಾಗವನ್ನು ಸರ್ಕಾರವೇ ಭರಿಸುವುದು. ಇದಲ್ಲದೆ ಇನ್ನೂ ಬೇರೆ ಬೇರೆ ರೀತಿಗಳಲ್ಲಿ ಸರ್ಕಾರದಿಂದ ಸಹಾಯ ದೊರೆಯುತ್ತಿದೆ. ಹೆಚ್ಚಿನ ಆಹಾರೋತ್ಪಾದನೆ ಯೋಜನೆಯನ್ವಯ ಉತ್ತಮ ಗುಣಮಟ್ಟದ ಬೀಜ, ಗೊಬ್ಬರ ಹಾಗೂ ತಾಂತ್ರಿಕ ಮಾರ್ಗದರ್ಶನಗಳನ್ನು ಸುಲಭವಾಗಿ ಪಡೆಯುವಂತಾಗಿದೆ.

ರೈತರಿಗೆ ಹಂಚಿರುವ ಬಿತ್ತನೆ ಬೀಜದ ಪ್ರಮಾಣ 1982-83ರಲ್ಲಿ 2,37,345ಕ್ವಿಂಟಾಲ್‌ಗಳಿದ್ದುದ್ದು, 1988-89ರಲ್ಲಿ 3,58,000 ಕ್ವಿಂಟಾಲ್‌ಗಳಷ್ಟು ಹೆಚ್ಚಿದೆ. ರೈತರು ನೀರಾವರಿಗಾಗಿ ಮಳೆಯನ್ನೇ ಈಗ ಅವಲಂಬಿಸಬೇಕಾಗಿಲ್ಲ. ಜಮೀನನ್ನು ಒಣ ಬೇಸಾಯ ಹಾಗೂ ನೀರಾವರಿ ಅಭಿವೃದ್ಧಿ ಕ್ಷೇತ್ರದಲ್ಲಿ ಒಳಪಡಿಸಲಾಗಿದೆ. ಈ ಯೋಜನೆಯನ್ವಯ ಪ್ರತಿ ಜಿಲ್ಲೆಯಲ್ಲಿ 25,000 ಹೆಕ್ಟೇರ್ ಜಮೀನನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ಹಾಗೂ ಶೇ. 80ರಷ್ಟು ಕರ್ನಾಟಕದ ರೈತ ಕುಟುಂಬಗಳು ಈ ಯೋಜನೆಯ ಲಾಭ ಪಡೆಯುತ್ತಿವೆ.

ರಾಜ್ಯ ಕಳೆದ ನಾಲ್ಕು ವರ್ಷಗಳಿಂದ ತೀವ್ರ ಬರಕ್ಕೆ ತುತ್ತಾಗಿತ್ತು. ಸರ್ಕಾರ ಅಗಾಧ ಪ್ರಮಾಣದಲ್ಲಿ ಬರ ಪರಿಹಾರ ಕ್ರಮ ತೆಗೆದುಕೊಂಡಿತು. ನೊಂದವರಿಗೆ ಕೆಲಸ ನೀಡಿ, ರಸ್ತೆ, ಕೆಲಸ, ಶಾಲಾ ಕಟ್ಟಡ, ಆಸ್ಪತ್ರೆ ನಿರ್ಮಾಣ, ಮುಂತಾದ ಶಾಶ್ವತ ಗ್ರಾಮೀಣ ಆಸ್ತಿಗಳನ್ನು ನಿರ್ಮಿಸಿತು. ಇದಲ್ಲದೆ ಜಾನುವಾರುಗಳ ರಕ್ಷಣೆಗೆ ಮೇವು, ಗೋಶಾಲೆಗಳನ್ನೂ ತೆರೆಯಿತು.

ಇಂದು ಕುಡಿಯುವ ನೀರು ಹಾಗೂ ವಿದ್ಯುಚ್ಛಕ್ತಿಯ ಸೌಲಭ್ಯ ಮುಕ್ತವಾಗಿ ದೊರಕುತ್ತಿದೆ. 1983ರಿಂದ ಈವರೆಗೆ ಒಟ್ಟು 58,224 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಪರಿಣಾಮ; 5,124 ಹೆಚ್ಚು ಹಳ್ಳಿಗಳಿಗೆ ಸುರಕ್ಷಿತ ಕುಡಿಯುವ ನೀರು ದೊರಕಿದೆ. ಕಳೆದ 35ವರ್ಷಗಳಲ್ಲಿ 1983ರವರೆಗೆ 47,726 ಕೊಳವೆ ಬಾವಿಗಳನ್ನು ತೊಡಲಾಗಿತ್ತು.

ಅಂಧಕಾರದಲ್ಲಿದ್ದ ಹಳ್ಳಿಗಳಿಗೆ ಬೆಳಕು:- ಕಳೆದ ಆರು ವರ್ಷಗಳಲ್ಲಿ 6,204 ಹಳ್ಳಿಗಳಿಗೆ ಹಾಗೂ 3,256 ಸಣ್ಣ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಒದಗಿಸಲಾಗಿದೆ. ಈ ಸಾಧನೆಗಳ ಹೋಲಿಕೆಯಾಗಿ ಮುಂಚೆ ಇದ್ದ ಆಡಳಿತಕ್ಕೆ ಅಂದರೆ, ಸ್ವಾತಂತ್ರ್ಯದ ನಂತರ 18,187 ಹಳ್ಳಿಗಳು ಮಾತ್ರ ವಿದ್ಯುಚ್ಛಕ್ತಿಯನ್ನು ಪಡೆದಿದ್ದವು.

ಪ್ರಸ್ತುತ ಸರ್ಕಾರವು ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲು ತನ್ನ ಶಕ್ತಿ ಮೀರಿ ಕ್ರಮಗಳನ್ನು ಕೈಗೊಂಡಿದೆ. 1983ರಿಂದ 1988ರ ಕೊನೆಯವರೆಗೆ ಒಟ್ಟು 5,50,000 ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸಲಾಗಿದೆ. ಸ್ವಾತಂತ್ರ್ಯ ನಂತರ 35ವರ್ಷಗಳಲ್ಲಿ 3,59,494 ಪಂಪ್‌ಸೆಟ್‌ಗಳಿಗೆ ಮಾತ್ರ ಪೂರೈಸಲಾಗಿತ್ತು.

ಸರ್ಕಾರವು ದಿನಗೂಲಿಯನ್ನು ಕನಿಷ್ಠ 7ರೂ.ಗಳಿಂದ 12 ರೂ.ಗಳಿಗೆ ಹೆಚ್ಚಿಸಿ ಅವರನ್ನು ತೊಂದರೆಯಿಂದ ಪಾರು ಮಾಡಿದೆ. ಕರ್ನಾಟಕದ ಗ್ರಾಮಾಂತರ ಪ್ರದೇಶಗಳಲ್ಲಿ ಹಸಿರು ಕಾರ್ಡ್ ಮೂಲಕ ರಿಯಾಯಿತಿ ದರದಲ್ಲಿ ಆಹಾರಧಾನ್ಯಗಳನ್ನು ಹಾಗೂ ಬಟ್ಟೆಗಳನ್ನು ಜನತೆ ಪಡೆಯುವಂತಾಗಿದೆ. ಕೇಸರಿ ಕಾರ್ಡ್ ಮೂಲಕ ಕಡಿಮೆ ದರದಲ್ಲಿ ಆಹಾರ ಧಾನ್ಯಗಳನ್ನು ವಿತರಿಸುವ ವ್ಯವಸ್ಥೆ ಮಾಡಲಾಗಿದೆ. ನಿರ್ಗತಿಕ ವಿಧವೆಯರಿಗೆ ಮಾಸಾಶನ, ಕೃಷಿ ಕಾರ್ಮಿಕ ಮಹಿಳೆಯರಿಗೆ ಭತ್ಯ, ಗ್ರಾಮೀಣ ಜನರಿಗೆ ಆಶಾಕಿರಣ ವಿಮಾಯೋಜನೆ , ಅಪಘಾತಗಳಲ್ಲಿನೊಂದವರಿಗೆ ಸಹಾಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಪಂಚಾಯತಿರಾಜ್:- ಕರ್ನಾಟಕ ಸರ್ಕಾರವು ಗಾಂಧೀಜಿಯವರ ಕನಸನ್ನು ನನಸಾಗಿಸಿದೆ ಹಾಗೂ ಸಂವಿಧಾನದ ಆದೇಶವನ್ನು ಕಾರ್ಯಗತಗೊಳಿಸಿದೆ. 1987ರಲ್ಲಿ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತ್‌ಗಳಿಗೆ ಚುನಾವಣೆ ನಡೆದು ಅಧಿಕಾರವಿಕೇಂದ್ರೀಕರಣವಾಗಿದೆ. ಕರ್ನಾಟಕ ಸರ್ಕಾರ ಜಾರಿಗೆ ತಂದ ಚುನಾವಣಾ ಸುಧಾರಣೆಗಳಲ್ಲಿ ಹಲವು ಕ್ರಮಗಳು ನಮ್ಮ ದೇಶದ ಬೇರೆಲ್ಲೂ ಜಾರಿಯಲ್ಲಿಲ್ಲ. ಅಷ್ಟೆ ಏಕೆ, ಜಗತ್ತಿನಲ್ಲೂ ಕೂಡ ಮೊದಲ ಬಾರಿಗೆ ಬಂದ ಸ್ವಾಗತಾರ್ಹ ಬದಲಾವಣೆ ಆಗಿದೆ. ಕರ್ನಾಟಕ ಕಾನೂನಿನನ್ವಯ ಸ್ಥಳೀಯ ಸಂಸ್ಥೆಗಳಲ್ಲಿ ಶೇ. 25ಮಹಿಳೆಯರಿಗೆ ಪ್ರಾತಿನಿಧ್ಯ ಇರಲೇಬೇಕು. ಸರ್ಕಾರವು ಧೋರಣೆ ನಿರೂಪಿಸುವಲ್ಲಿ, ಯೋಜನೆಗಳನ್ನು ತಯಾರಿಸುವ ಹಾಗೂ ಕಾರ್ಯರೂಪಕ್ಕೆ ತರುವಲ್ಲಿ ಮಹಿಳೆಯರು ಕ್ರಿಯಾತ್ಮಕ ಪಾತ್ರವಹಿಸಬೇಕೆಂದು ಬಯಸುತ್ತದೆ. 18ನೇ ವಯಸ್ಸಿನವರೆಗೆ ಮತದಾನದ ಹಕ್ಕು ನೀಡಿರುವುದು ಇದೀಗ ಅನುಕರಣೀಯಾಗಿದ್ದು ಕೇಂದ್ರ ಸರ್ಕಾರವೂ ಸಹ ಈ ದಿಶೆಯಲ್ಲಿ ಶಾಸನ ಜಾರಿಗೊಳಿಸಲು ಉದ್ದೇಶಿಸಿದೆ.

ಈ ಮೊದಲು ಮಹಿಳೆಯರಿಗೆ ತೀರಾ ಕಡಿಮೆ ಉದ್ಯೋಗಾವಕಾಶವಿತ್ತು. ಕಳೆದ ಆರು ವರ್ಷಗಳಿಂದ ಈ ಕಳವಳಕಾರಿ ಸ್ಥಿತಿಯಲ್ಲಿ ಬದಲಾಗುತ್ತಿದೆ. ಕರ್ನಾಟಕ ಸರ್ಕಾರವು ಮಹಿಳೆಯರ ಮತ್ತು ಅಲ್ಪಸಂಖ್ಯಾತರ ಸಹಾಯಕ್ಕಾಗಿ ಒಂದು ಪ್ರತ್ಯೇಕ ಅಭಿವೃದ್ಧಿ ಪ್ರಾಧಿಕಾರವನ್ನು ಸ್ಥಾಪಿಸಿದೆ. ಈ ಸಂಸ್ಥೆಗಳು ಸಮಾಜದಲ್ಲಿನ ಹಿಂದುಳಿದ ವರ್ಗಗಳವರಿಗೆ ಸ್ವಂತ ಉದ್ಯೋಗಗಳನ್ನು ಪ್ರಾರಂಭಿಸಲು ಪ್ರೇರೇಪಿಸುತ್ತವೆ. ಅಂತೆಯೇ ವಿಶೇಷ ಘಟಕ ಯೋಜನೆ, ಪರಿಶಿಷ್ಟ ಜಾತಿಯ ಹಾಗೂ ಪರಿಶಿಷ್ಟ ಜನಾಂಗದ ಜನತೆಯ ಕಲ್ಯಾಣಕ್ಕೆ ಪ್ರೋತ್ಸಾಹ ಕೊಡುತ್ತಿದೆ. ಕರ್ನಾಟಕ ಸರ್ಕಾರ ಸಣ್ಣ ಕೈಗಾರಿಕೆಗಳಿಗೆ ಎಲ್ಲಾ ರೀತಿಯ ಪ್ರೋತ್ಸಾಹವನ್ನು ನೀಡುತ್ತಿದೆ. 1983ರಿಂದ ಪ್ರತಿ ತಿಂಗಳು ಸುಮಾರು 1000 ಸಣ್ಣ ಕೈಗಾರಿಕೆಗಳು ಸ್ಥಾಪಿಸಲ್ಪಟ್ಟಿವೆ.

ಆಡಳಿತ ಯಂತ್ರವನ್ನು ಚುರುಕುಗೊಳಿಸುವುದಲ್ಲದೆ ಪ್ರತಿಯೊಬ್ಬ ಸರ್ಕಾರೀ ನೌಕರ ಜನರ ಸೇವೆಗೆ ಬದ್ಧನಾಗಿರಬೇಕೆಂದು ಸರ್ಕಾರ ಬಯಸಿ ಲೋಕಾಯುಕ್ತ ನೇಮಿಸಿದೆ.

-ಕರ್ನಾಟಕ ವಾರ್ತೆ



ಅಂತರರಾಷ್ಟ್ರೀಯತೆಯ ಕರ್ತವ್ಯ ನೆರವೇರಿಸಿದ ಕ್ಯೂಬಾ ಸೈನಿಕರು

ಲುವಾಂಡಾ, ಆಫ್ರಿಕಾದ ಖಂಡದ ದಕ್ಷಿಣ ಭಾಗದಲ್ಲಿರುವ ಅಂಗೋಲಾದ ರಾಜಧಾನಿ. ಜನವರಿ 10ರಂದು ಎಲ್ಲೆಲ್ಲೂ ಉಲ್ಲಾಸ, ಸಡಗರದ ವಾತಾವರಣ. ಅಪಾರ ಸಂಖ್ಯೆಯಲ್ಲಿ ಜನ ಹಬ್ಬದ ಸಡಗರದಿಂದ ನೆರೆದಿದ್ದರು. ಆದರೆ ಯಾವುದೇ ಧಾರ್ಮಿಕ ಹಬ್ಬ ಆಚರಿಸಲಿಕ್ಕೆ ಅಲ್ಲ. ಕಳೆದ ಹದಿಮೂರು ವರ್ಷಗಳಿಂದ ಪ್ರತಿಗಾಮಿಗಳಿಂದ ಕ್ರಾಂತಿಕಾರೀ ಸರ್ಕಾರ ವನ್ನು ರಕ್ಷಿಸುವ ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯತೆಯ ಕರ್ತವ್ಯ ವನ್ನು ನೆರವೇರಿಸಿದ ಕ್ಯೂಬಾದ ಸೈನಿಕರಿಗೆ ಹೃದಯಂಗಮ ಬೀಳ್ಕೊಡುಗೆ ನೀಡಲು ಅವರು ನೆರೆದಿದ್ದರು.

ಮೇಲಿನ ಚಿತ್ರದಲ್ಲಿ ಕ್ಯೂಬಾದ ಯುವ ಸೈನಿಕರಿಬ್ಬರ ಹೆಗಲ ಮೇಲೆ ಎ.ಕೆ.-47 ರೈಫಲ್‌ಗಳ ಬ್ಯಾರಲ್‌ಗಳಲ್ಲಿ ಬೋಗನ್‌ವಿಲಾ ಹೂವುಗಳನ್ನು ಇಟ್ಟು ಕೊಂಡ ಇಬ್ಬರು ಅಂಗೋಲಾದ ಮಕ್ಕಳನ್ನು ಕಾಣಬಹುದು. ಈ ಹಸುಳೆಗಳ ಭವ್ಯ ಭವಿಷ್ಯದ ಹೂವು ಅರಳಲು ಸಾಧ್ಯವಾಗುವಂತೆ ಮಾಡಲು ತಮ್ಮ ಬಂದೂಕು ಹಿಡಿದು ತಾಯ್ನಾಡಿನಿಂದ ಸಾವಿರಾರು ಮೈಲು ದೂರ ಸಂತೋಷ'ದಿಂದ ಸ್ವೇಚ್ಛೆಯಿಂದ ಬಂದ ಯುವಕರಿವರು. ಲುವಾಂಡದಿಂದ 35 ಕಿ.ಮೀ. ದೂರದ ಫುಂಡಾ ಎಂಬಲ್ಲಿಯ ಮಿಲಿಟರಿ ತರಬೇತಿ ಕೇಂದ್ರದಲ್ಲಿ ನಡೆದ ಬೀಳ್ಕೊಡುಗೆ ಸಮಾರಂಭವೊಂದರ ದೃಶ್ಯವಿದು.

1975 ರಲ್ಲಿ ಕ್ಯೂಬಾದ ಪಡೆಗಳು ಅಂಗೋಲಾದ ಸಾಮ್ರಾಜ್ಯಶಾಹಿ-ವಿರೋಧಿ ಜನಪರ ಸರ್ಕಾರವನ್ನು ಉರುಳಿಸುವ ಪ್ರತಿಗಾಮಿಗಳ,ದಕ್ಷಿಣಆಫ್ರಿಕಾದ ಜನಾಂಗ ದ್ವೇಷಿಗಳ ಹಾಗೂ ಇವರೆಲ್ಲರಿಗೆ ಬೆಂಬಲವಾಗಿದ್ದ ಸಾಮ್ರಾಜ್ಯಶಾಹಿಗಳ ಪಿತೂರಿಯನ್ನು ಎದುರಿಸುವಲ್ಲಿ ನೆರವಾಗಲು ಅಂಗೋಲಾಕ್ಕೆ ಬಂದಿದ್ದವು. ಅಂಗೋಲಾದ ಅಧ್ಯಕ್ಷ ಜೋಸ್ ಎಡವಾರ್ಡ್ ದೋಸ್ ಸಾಂತೋಸ್‌ರವರ ಸರ್ಕಾರದ ಮನವಿ ಮೇರೆಗೆ ವಿಶ್ವಸಂಸ್ಥೆಯ ಚಾರ್ಟರ್‌ನ 51ನೇ ಕಲಮಿನ ಪ್ರಕಾರ ಕ್ಯೂಬಾದ ಅಂತರ್ರಾಷ್ಟ್ರೀಯವಾದಿ ಪಡೆಗಳು ಅಂಗೋಲಾದ ನೆರವಿಗೆ ಬಂದವು.

ಇತ್ತೀಚೆಗೆ ಅಂಗೋಲಾ, ಕ್ಯೂಬಾ, ದಕ್ಷಿಣ ಆಫ್ರಿಕಾ ಮತ್ತು ಅಮೆರಿಕಾದ ಪ್ರತಿನಿಧಿಗಳ ನಡುವೆ ಕಾಂಗೋದ ರಾಜಧಾನಿ ಬ್ರಾಝವಿಲ ಯಲ್ಲಿ ಒಂಭತ್ತು ಸುತ್ತಿನ ಮಾತುಕತೆಗಳ ನಂತರ ಒಂದು ಒಪ್ಪಂದವಾಯಿತು. ಇದರ ಪ್ರಕಾರ ದಕ್ಷಿಣ ಆಫ್ರಿಕಾ ತಾನು ಆಕ್ರಮಿಸಿಕೊಂಡ ನಮೀಬಿಯಾವನ್ನೂ ಸೆಪ್ಟೆಂಬರ್ 1978ರ ವಿಶ್ವಸಂಸ್ಥೆಯ ನಿರ್ಣಯ ಸ್ವೀಕರಿಸಿ ತೆರವು ಮಾಡಲು ಒಪ್ಪಿಕೊಂಡಿತು. ಪ್ರತಿಯಾಗಿ ಅಂಗೋಲಾದಿಂದ ತನ್ನ ಪಡೆಗಳನ್ನು ವಾಪಸು ಪಡೆಯಲು ಕ್ಯೂಬಾ ಒಪ್ಪಿಕೊಂಡಿತು. ಆದರೆ ಮತ್ತೆ ದಕ್ಷಿಣ ಆಫ್ರಿಕಾದ ವರ್ಣದ್ವೇಷಿಗಳು ಏಳೇ ತಿಂಗಳೊಳಗೆ ಕ್ಯೂಬಾದ ಪಡೆಗಳು ವಾಪಸಾಗಬೇಕೆಂದು ತಕರಾರು ಮಾಡಲಾರಂಭಿಸಿದರು.ಅಂತ್ಯದ ನವೆಂಬರ್ 1988ರಲ್ಲಿ ನಡೆದ ಕೊನೆಯ ಸುತ್ತಿನ ಮಾತುಕತೆಯಲ್ಲಿ 27 ತಿಂಗಳಲ್ಲಿ ಕ್ಯೂಬಾದ 50ಸಾವಿರ ಸೈನಿಕರು ಅಂಗೋಲಾದಿಂದ ವಾಪಸಾಗಬೇಕೆಂದು ಒಪ್ಪಿಕೊಳ್ಳಲಾಯಿತು.

ಇದರ ಪ್ರಕಾರವೇ ಜನವರಿ 10ರಂದು 450 ಸೈನಿಕರ ಮೊದಲ ತಂಡಕ್ಕೆ ಅಂಗೋಲಾದ ಕೃತಜ್ಞ ದುಡಿಯುವ ಜನ ಹಾರ್ದಿಕ ಬೀಳ್ಕೊಡುಗೆ ನೀಡಿದರು. ಮೊದಲ ಹಂತದಲ್ಲಿ 3000 ಸೈನಿಕರು ನಮೀಬಿಯಾದಲ್ಲಿ ಚುನಾವಣೆ ನಡೆಯುವ ಮೊದಲು ಇನ್ನೂ 25 ಸಾವಿರ ಸೈನಿಕರು. ವರ್ಷದ ಅಂತ್ಯದೊಳಗೆ ಇನ್ನೂ 8000 ಸೈನಿಕರು ಉಳಿದ ಸೈನಿಕರು 1990 ಹಾಗೂ 1991ರ ಆರಂಭದಲ್ಲಿ ವಾಪಸು ಹೋಗುವರು. ದಕ್ಷಿಣ ಆಫ್ರಿಕಾದ ವರ್ಣದ್ವೇಷಗಳಿಂದ ಅಂಗೋಲಾದ ಭದ್ರತೆಯ ಸಂಗತಿಯನ್ನು ಗಮನದಲ್ಲಿಟ್ಟುಕೊಂಡು ಈ ವೇಳಾಪಟ್ಟಿಯನ್ನು ತಯಾರಿಸಲಾಗಿದೆ. ಮೊದಲ ಹಂತವನ್ನು ಕ್ಯೂಬಾ ಈಗಾಗಲೇ ಪೂರ್ವನಿರ್ಧಾರಿತ ಅವಧಿಯ ಮೊದಲೇ ಪೂರೈಸಿದೆ.

ಅತ್ತ ನಮೀಬಿಯಾದಿಂದಲೂ ದಕ್ಷಿಣ ಆಫ್ರಿಕಾದ ವರ್ಣದ್ವೇಷಿಗಳ ಬಹುಪಾಲು ಪಡೆಗಳು ತೆರವು ಮಾಡಿ 13 ಲಕ್ಷ ಜನ ಸಂಖ್ಯೆಯ ಆಫ್ರಿಕಾದ ಈ ಕೊನೆಯ ವಸಾಹತು ಸ್ವಾತಂತ್ರ್ಯ ಪಡೆಯುತ್ತದೆ.

ಮತ್ತೊಂದು ಸಾಮ್ರಾಜ್ಯಶಾಹೀ ಉದ್ಧಟತನ

ಎರಡುವರ್ಷಗಳ ನಂತರ ಮತ್ತೊಮ್ಮೆ ಅಮೆರಿಕದ ಸಾಮ್ರಾಜ್ಯಶಾಹಿಗಳು ಲಿಬ್ಯಾದ ವಿರುದ್ಧ ತಮ್ಮ ಆಕ್ರಾಮಕ ನಿಲುವನ್ನು ಪ್ರದರ್ಶಿಸಿ ವಿಶ್ವದ ಜನಾಭಿಪ್ರಾಯದ ಖಂಡನೆಗೊಳಗಾಗಿದ್ದಾರೆ. ಜನವರಿ 4 ರಂದು ಎರಡು ಲಿಬ್ಯಾದ ಮಿಗ್ ವಿಮಾನಗಳನ್ನು ಅಮೆರಿಕನ್ ವಿಮಾನಗಳು ಉದ್ಧಟತನದಿಂದ ಭೂಮಧ್ಯ ಸಾಗರದ ಮೇಲೆ ಹೊಡೆದುರುಳಿಸಿದವು. ಈ ವಿಮಾನಗಳು ಅಮೆರಿಕನ್ ನಾವಿಕ ಪಡೆಯ ಮೇಲೆ ಆಕ್ರಮಣ ನಡೆಸುವ ಉದ್ದೇಶದಿಂದ ಬರುತ್ತಿದ್ದವಾದ್ದರಿಂದ ಆತ್ಮರಕ್ಷಣೆಗಾಗಿ\ ತಮ್ಮ ವಿಮಾನಗಳು ಗುಂಡು ಹಾರಿಸಿದವು ಎಂಬ ಅಮೆರಿಕಾದ ಹೇಳಿಕೆಯನ್ನು ಸುಮಾರಾಗಿ ಯಾರೂ ನಂಬಿಲ್ಲ. ಸ್ವತಃ ಅಮೆರಿಕನ್ ತಜ್ಞರೇ ಅಮೆರಿಕನ್ ಸರ್ಕಾರ ಪ್ರಕಟಿಸಿದ ಈ ಘಟನೆಯ ಚಿತ್ರಗಳನ್ನು ವಿಶ್ಲೇಷಿಸಿ ಅಮೆರಿಕಾದ ದಾವೆ ಬುಡಹೀನ ಎಂದು ತಿರಸ್ಕರಿಸಿದ್ದಾರೆ. ಇದೊಂದು ಪೂರ್ವ ಯೋಜಿತ ಆಕ್ರಮಣ ಎಂದು ಲಿಬ್ಯಾ ಆಪಾದಿಸಿದೆ.

ಈ ಆಕ್ರಮಣದ ಕೆಲವೇ ಗಂಟೆಗಳ ಮೊದಲು ನ್ಯೂಯಾರ್ಕಿನಲ್ಲಿರುವ ಅಲಿಪ್ತ ಸಮನ್ವಯ ಕಚೇರಿ ಸಿದ್ಧಪಡಿಸಿದ್ದ ಹೇಳಿಕೆ ಲಿಬ್ಯಾದ ವಿರುದ್ಧ ಅಮೆರಿಕಾ ಮತ್ತೆ ಆಕ್ರಮಣ ನಡೆಸುವ ಸಾಧ್ಯತೆ ಬಗ್ಗೆ ಆತಂಕ ವ್ಯಕ್ತಪಡಿಸಿತ್ತು. ಏಪ್ರಿಲ್ 1986ರ ಆಕ್ರಮಣದ ಮೊದಲು ಕೂಡಾ ಅಮೆರಿಕಾ ಇದೇ ರೀತಿ ಲಿಬ್ಯಾದ ವಿರುದ್ಧ ವ್ಯಾಪಕ ಅಪಪ್ರಚಾರ ನಡೆದಿತ್ತು ಎಂದು ಹೇಳಿಕೆ ಎಚ್ಚರಿಸಿತ್ತು. ಮರುದಿನ ಬೆಳಿಗ್ಗೆಯ ಸುದ್ದಿ ಅಲಿಪ್ತ ರಾಷ್ಟ್ರಗಳ ಆತಂಕವನ್ನು ನಿಜವಾಗಿಸಿತ್ತು.

ಅಮೆರಿಕಾದ ಈ ಆಕ್ರಮಣವನ್ನು ದೂಷಿಸುವ ಠರಾವನ್ನು ವಿಶ್ವಸಂಸ್ಥೆಯ ಭದ್ರತಾ ಸಮಿತಿ ಚರ್ಚಿಸಿ ಸಮಿತಿಯ 15 ಸದಸ್ಯರಲ್ಲಿ ಸೋವಿಯತ್ ಒಕ್ಕೂಟದ ಮತ್ತು ಚೀನಾವು ಸೇರಿದಂತೆ 9 ದೇಶಗಳು ಅದನ್ನು ಬೆಂಬಲಿಸಿದವು. ಸಹಜವಾಗಿಯೇ ಅಮೆರಿಕಾ, ಬ್ರಿಟನ್, ಫ್ರಾನ್ಸ್, ಕೆನಡಾ ಅದನ್ನು ವಿರೋದಿಸಿದವು. ಬ್ರಾಝಿಲ್ ಮತ್ತು ಫಿನ್‌ಲೆಂಡ್ ಗೈರುಹಾಜರಾದವು. ಯಥಾ ಪ್ರಕಾರ ಭದ್ರತಾ ಸಮಿತಿಯ ಖಾಯಂ ಸದಸ್ಯರಾದ ಅಮೆರಿಕಾ, ಬ್ರಿಟನ್, ಫ್ರಾನ್ಸ್ ನಿಷೇಧಾಧಿಕಾರ (ವಿಟೋ) ಚಲಾಯಿಸಿ ಈ ಠರಾವು ಪಾಸಾಗದಂತೆ ಮಾಡಿದವು. ಆದರೂ ಸಾಮ್ರಾಜ್ಯಶಾಹೀ ಶಕ್ತಿಗಳಿಗೆ ಮುಖಭಂಗವಾದುದು ಸ್ಪಷ್ಟವಾಗಿತ್ತು. ಯಾಕೆಂದರೆ ಭದ್ರತಾ ಸಮಿತಿಯಲ್ಲಿ ವಿಟೋ ಅಧಿಕಾರ ಚಲಾಯಿಸಿ ಮುಖವುಳಿಸಿಕೊಳ್ಳಲು ಪ್ರಯತ್ನಿಸುತಿರುವಾಗಲೇ ಅತ್ತ ವಾಷಿಂಗ್ಟನ್‌ನಲ್ಲಿ ಲಿಬ್ಯಾದ ಸಮೀಪ ಭೂಮಧ್ಯ ಸಾಗರದಲ್ಲಿ ನಡೆಯಬೇಕಾಗಿದ್ದ ಅಮೆರಿಕನ್ ನಾವಿಕ ಪಡೆಯ ಕವಾಯತುಗಳನ್ನು ರದ್ದು ಪಡಿಸುವ ಸುದ್ದಿ ನೀಡಲಾಯಿತು. ಅಮೆರಿಕದ ಸಾಮ್ರಾಜ್ಯಶಾಹೀ ಮಿತ್ರರು ಕೂಡ ಇಂತಹ ಆಕ್ರಾಮಕ ಕ್ರಮಗಳನ್ನು ಮುಂದೆಯೂ ಬೆಂಬಲಿಸುವುದು ಸಾಧ್ಯವಾಗಲಿಕ್ಕಿಲ್ಲ ಎಂದು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ ಎಂದು ವರದಿಯಾಗಿದೆ.

ಕೋಮುವಾದಿಗಳ ಆಟ ಸಾಗಲಿಲ್ಲ

ಗ್ವಾಲಿಯರ್ ಇದುವರೆಗೆ ಕೋಮು ಗಲಭೆಗಳಿಂದ ಮುಕ್ತವಾಗಿದ್ದ ನಗರ. ನವೆಂಬರ್ 2ರಂದು ಅಲ್ಲಿಯೂ ದೊಡ್ಡ ಕೋಮು ಗಲಭೆ ನಡೆಯುವ ಸಂಭವವಿತ್ತು. ಸಿ.ಪಿ.ಐ.(ಎಂ) ಮತ್ತು ಇತರ ಎಡ, ಜಾತ್ಯಾತೀತ ಶಕ್ತಿಗಳ ಮಧ್ಯಪ್ರವೇಶದಿಂದ ಅದನ್ನು ತಡೆಯುವುದು ಸಾಧ್ಯವಾಯಿತು.

ನವೆಂಬರ್ 1ರಂದು ಕೆಲವು ಅಪರಿಚಿತ ವ್ಯಕ್ತಿಗಳು ಎರಡು ದೇವಸ್ಥಾನಗಳ ಮೂರ್ತಿಗಳನ್ನು ವಿರೂಪಗೊಳಿಸಿದ್ದರು. ಅಪರಿಚಿತ ವ್ಯಕ್ತಿಗಳು ಯಾರು ಎಂದು ಇದುವರೆಗೂ ಪತ್ತೆಯಾಗಿಲ್ಲ. ಆದರೆ ಮರುದಿನ ಬೆಳಗಿನಿಂದಲೇ ಬಿ.ಜೆ.ಪಿ., ಆರ್.ಎಸ್.ಎಸ್., ಹಿಂದೂ ಶಿವಸೇನೆ, ಬಜರಂಗ ವಾಹಿನಿ ಮತ್ತು ಹಿಂದೂ ಮಹಾಸಭಾ ಮುಸ್ಲಿಮರ ವಿರುದ್ಧ ಧ್ವನಿವರ್ಧಕಗಳ ಮೂಲಕ ವಿಷಕಾರಲಾರಂಭಿಸಿದರು. ಪರಿಣಾಮವಾಗಿ ಏಳು ಮಸೀದಿಗಳು, ದರ್ಗಾಗಳು ಹಾಗೂ ಅಂಗಡಿಗಳ ಮೇಲೆ ಕಲ್ಲು ತೂರಾಡಿದವು. ಆದರೆ ಪೊಲೀಸ್ ನರಬಡಿದವರಂತೆ ವರ್ತಿಸಿದರು. ಗಲಭೆಕೋರರನ್ನು ತಡೆಯಲು ಏನೂ ಮಾಡಲಿಲ್ಲ.

ಸಿ.ಪಿ.ಐ.(ಎಂ)ನ ಜಿಲ್ಲಾ ಘಟಕ ಈ ಸಂದರ್ಭದಲ್ಲಿ ತಕ್ಷಣ ಮಧ್ಯಪ್ರವೇಶಿಸಬೇಕೆಂದು ನಿರ್ಧರಿಸಿ ನೂರಾರು ಕಾರ್ಯಕರ್ತರನ್ನು ಒಟ್ಟುಗೂಡಿಸಿದರು. ಜೆ.ಸಿ.ಮಿಲ್ಸ್ ಎದುರು ಬೋನಸ್ ಬೇಡಿಕೆಗಾಗಿ ಒತ್ತಾಯಿಸುತ್ತಿದ್ದ ಸಿ.ಐ.ಟಿ.ಯು. ನೇತೃತ್ವದ ಕಾರ್ಮಿಕರು ತಕ್ಷಣ ಗಿರ್ಡಿ ಗೇಟ್‌ನಿಂದ ಗಲಭೆ ಪ್ರದೇಶದತ್ತ ಧಾವಿಸಿ ಕೋಮು-ಗಲಭೆ ತಡೆಯುವ ಕೆಲಸದಲ್ಲಿ ನೆರವಾದರು.

ಈ ನಡುವೆ ತುಸುಎಚ್ಚೆತ್ತ ಜಿಲ್ಲಾ ಆಡಳಿತ ಶಾಂತಿ ಸಮಿತಿಯ ಸಭೆ ಕರೆಯಿತು. ಸಿ.ಪಿ.ಐ.(ಎಂ)ನ ತಾತ್ಕಾಲಿಕ ರಾಜ್ಯ ಕಾರ್ಯದರ್ಶಿ ಕಾ. ಶೈಲೇಂದ್ರ ಶೈಲಿ ನೇರ ಗಲಭೆ ಪೀಡಿತ ಪ್ರದೇಶಕ್ಕೆ ತೆರಳಿ ಗಲಭೆಕೋರರನ್ನು ರಸ್ತೆಯಲ್ಲೇ ಎದುರಿಸೋಣ ಎಂದು ಸಲಹೆ ನೀಡಿದರು. ಬಿ.ಜೆ.ಪಿ. ತನ್ನ ಆಟ ಬಯಲಾಗುತ್ತದೆಂಬ ಭಯದಿಂದ ಹಿಂದೇಟು ಹಾಕಿತು. ಆಶ್ಚರ್ಯವೆಂದರೆ ಸಿ.ಪಿ.ಐ. ಕೂಡಾ ಮೊದಲು ಕೇವಲ ಒಂದು ನಿರ್ಣಯ ಅಂಗೀಕರಿಸಿದರೆ ಸಾಕು ಎಂದು ಬಯಸಿದರೂ ನಂತರ ಶಾಂತಿಯಾತ್ರೆಗೆ ಒಪ್ಪಿಕೊಂಡಿತು.ಮಧ್ಯಾಹ್ನ ಸಿ.ಪಿ.ಐ.(ಎಂ)ನ ಪ್ರಯತ್ನದಿಂದ ಜಾತ್ಯಾತೀತ ಪಕ್ಷಗಳು ಮಧ್ಯ ಪ್ರವೇಶಿಸಲು ನಿರ್ಧರಿಸಿ ಶಾಂತಿ ಯಾತ್ರೆಯಲ್ಲಿ ಅಪಾರ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸಿದ್ದರು.

ಕೆಲವೇ ಗಂಟೆಗಳೊಳಗೆ ಸಿ.ಪಿ.ಐ.(ಎಂ) 25 ಸಾವಿರ ಕರಪತ್ರಗಳನ್ನು ಮುದ್ರಿಸಿ ಹಂಚಿತು. ನಂತರ ಎಲ್ಲಾ ಜಾತ್ಯಾತೀತ ಪಕ್ಷಗಳು ಸೇರಿ 80ಸಾವಿರ ಕರಪತ್ರಗಳನ್ನು ಹಂಚಿದವು. ಆರ್.ಎಸ್.ಎಸ್.-ಬಿ.ಜೆ.ಪಿ. ತಮ್ಮ ಮುಖ ಉಳಿಸಿಕೊಳ್ಳಲು ಈಗ ನೆಪಗಳಿಗೆ ತಡಕಾಡಲಾರಂಭಿಸಿದರು.ಆದರೆ ತಮ್ಮ ಆಟವನ್ನು ಸಾಗದಂತೆ ಮಾಡಿದ ಸಿ.ಪಿ.ಐ.(ಎಂ)ನ ಮೇಲೆ ಅವಕ್ಕೆ ಎಷ್ಟು ಸಿಟ್ಟು ಬಂದಿದೆ ಎಂಬುದು ಅವರ ಕಟ್ಟಾ ಬೆಂಬಲಿಗ ಪತ್ರಿಕೆ 'ಸ್ವದೇಶ್' ಪತ್ರಿಕೆ ಸಿ.ಪಿ.ಐ.(ಎಂ) ಮೇಲೆ ವಿಷಕಾರಲಾರಂಭಿಸಿದ ರೀತಿಯನ್ನು ಕಂಡರೆ ಸ್ಪಷ್ಟವಾಗುತ್ತದೆ.

ತಮಿಳುನಾಡು ೧೯೮೯ (ಪುಟ 5ರಿಂದ)

ನವರು ಧ್ವಂಸ ಮಾಡಿ ಕಾರ್ಯಕರ್ತರನ್ನು ಥಳಿಸಿದ್ದಾರೆ. ಪೊಲೀಸರ ಸಹಾಯದಿಂದ ತಮ್ಮ ಪ್ರಜಾಪ್ರಭುತ್ವ ವಿರೋಧಿ ಕೃತ್ಯಗಳನ್ನು ನಡೆಸುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ವಿವಿಧ ಜಾತಿಗಳ ಕೋಮುಗಳ ಮುಖಂಡರುಗಳಿಗೆ ಹೇರಳ ಹಣ ನೀಡಿ ಆಯಾ ಜಾತಿಯ ಕೋಮಿನ ಮತಗಳನ್ನು ಕಸಿಯಲು ಹವಣಿಸುತ್ತಿದ್ದಾರೆ. ಸಿನಿಮಾ ನಟಿ ಶ್ರೀದೇವಿ ಒಳಗೊಂಡಂತೆ ಹಲವು ಸಿನಿಮಾ ನಟರುಗಳನ್ನು ಕಾಂಗ್ರೆಸ್ ತನ್ನ ಪ್ರಚಾರಕ್ಕೆ ಬಳಸಿಕೊಳ್ಳುತ್ತಿದೆ. ಸಿ.ಪಿ.ಐ.(ಎಂ)ಅನ್ನು ಬಿಟ್ಟು ಉಳಿದೆಲ್ಲ ಪಕ್ಷಗಳು ಸಿನಿಮಾ ನಟರನ್ನು ಬಳಸಿಕೊಳ್ಳುತ್ತಿವೆ.

ಈ ಚುನಾವಣೆಯಲ್ಲಿ ಸಿ.ಪಿ.ಐ. ಅನುಸರಿಸಿದ ಸಂದರ್ಭಸಾಧಕ ನಿಲುವು ಅದರ ಕಾಂಗ್ರೆಸ್(ಐ) ವಿರೋಧಿ ನಿಲುವಿನಿಂದ ದೂರ ಸರಿಯುತ್ತಿರುವ ಸೂಚನೆಯಾಗಿದೆ. ಜಯಲಲಿತ ಗುಂಪಿನೊಂದಿಗೆ ಸಿ.ಪಿ.ಐ. ಮಾಡಿಕೊಂಡಿರುವ ಹೊಂದಾಣಿಕೆ ಕಾಂಗ್ರೆಸ್(ಐ)ಗೆ ಅನುಕೂಲಕರವಾದ ಪರಿಸ್ಥಿತಿಯನ್ನು ಉಂಟು ಮಾಡಿದೆ.

ಜಯಲಲಿತ ಪಕ್ಷದ ಖಜಾಂಚಿ ತಿರುನಾವುಕ್ಕರಸು ಅವರು ಪತ್ರಕರ್ತರೊಂದಿಗೆ ಮಾತನಾಡುತ್ತಾ ಚುನಾವಣೆಯ ನಂತರ ತಮ್ಮ ಪಕ್ಷ ಕಾಂಗ್ರೆಸ್(ಐ)ಯೊಂದಿಗೆ ಸೇರಿ ಮಂತ್ರಿ ಮಂಡಲ ರಚಿಸುವುದಾಗಿ ತಿಳಿಸಿದ್ದಾರೆ. ಈ ಪರಿಸ್ಥಿತಿಯಲ್ಲಿ ಸಿ.ಪಿ.ಐ.ನ ಕಾಂಗ್ರೆಸ್(ಐ) ವಿರೋಧಿ ನೀತಿ ಎಂಬುದು ತಮಾಷೆಯ ಸಂಗತಿಯಾಗಿದೆ. ಕೇವಲ ಕೆಲವು ಸ್ಥಾನಗಳು ಹೆಚ್ಚಿಗೆ ಸಿಗುವುದೆಂಬ ಕಾರಣಕ್ಕಾಗಿ ಸಿ.ಪಿ.ಐ. ತನ್ನ ರಂಗವನ್ನೇ ಬದಲಾಯಿಸಿರುವುದು ಅವರಿಗಿರುವ ಸಂಕುಚಿತ ಸಂದರ್ಭಸಾಧಕ ನಿಲುವನ್ನಷ್ಟೇ ಎತ್ತಿ ತೋರಿಸುತ್ತದೆ. ಸಿ.ಪಿ.ಐ. ಪಕ್ಷವು ಗೊಡಲೂರು. ತಿರುಪ್ಪೂರ್ ಮತ್ತು ವಾಸುದೇವನಲ್ಲೂರು ವಿಧಾನಸಭಾ ಕ್ಷೇತ್ರಗಳಲ್ಲಿ ನೇರವಾಗಿ ಸಿ.ಪಿ.ಐ.(ಎಂ) ನೊಂದಿಗೆ ಮುಖಾಮುಖಿಯಾಗಿದೆ.

ಆದರೆ ಸಿ.ಪಿ.ಐ.(ಎಂ)ನ ರಂಗವು ಚುನಾವಣೆಗಾಗಿ ಸೃಷ್ಟಿಯಾದುದಲ್ಲ. ಕಳೆದ 8ವರ್ಷಗಳಿಂದ ಡಿ.ಎಂ.ಕೆ. ಮತ್ತು ಸಿ.ಪಿ.ಐ.ನೊಂದಿಗೆ ಸೇರಿ ಸರ್ಕಾರಿ ನೌಕರರ ಶಿಕ್ಷಕರ ನ್ಯಾಯಯುತ ಹೋರಾಟದಲ್ಲಿ ಭಾಗವಹಿಸಿದ್ದೇವೆ. ಎ.ಐ.ಎ.ಡಿ.ಎಂ.ಕೆ.ಯ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಿ ನಾವು ಡಿ.ಎಂ.ಕೆ. ಮತ್ತು ಸಿ.ಪಿ.ಐ.ನೊಂದಿಗೆ ಅನೇಕ ಹೋರಾಟ ನಡೆಸಿದ್ದೇವೆ.

ಎ.ಐ.ಎ.ಡಿ.ಎಂ.ಕೆ. ಜನ ವಿರೋಧಿ. ಪ್ರಜಾಪ್ರಭುತ್ವ ವಿರೋಧಿ ನೀತಿಗಳನ್ನು ಬೆಂಬಲಿಸಿದ ಕಾಂಗ್ರೆಸ್(ಐ) ಇಂದು ಅದಕ್ಕೂ ತನಗೂ ಏನೇನೂ ಸಂಬಂಧವಿಲ್ಲವೆಂಬ ರೀತಿಯಲ್ಲಿ ಜನತೆಯ ಎದಿರು ನಟನೆ ಮಾಡುತ್ತಿದೆ. ಎ.ಐ.ಎ.ಡಿ.ಎಂ.ಕೆ.ಯ ಜನ ವಿರೋಧಿ ಕೃತ್ಯಗಳನ್ನು ವಿಧಾನಸಭೆಯ ಒಳಗೂ ಮತ್ತು ಹೊರಗೂ ಬೆಂಬಲಿಸಿದ ಕಾಂಗ್ರೆಸ್ (ಐ) ಇಂದು ಜನರನ್ನು ವಂಚಿಸಲು ಹವಣಿಸಿದೆ.

ಎ.ಐ.ಎ.ಡಿ.ಎಂ.ಕೆ.ಯ ಎರಡು ಬಣಗಳು ತಮ್ಮ ತಪ್ಪುಗಳನ್ನು ಅರ್ಥ ಮಾಡಿಕೊಳ್ಳದೆ ಲಂಚ ರುಷುವತ್ತುಗಳಲ್ಲಿ ಮುಳುಗಿದ್ದ ಮಂತ್ರಿವರ್ಯರುಗಳನ್ನು ಜತೆಯಲ್ಲಿ ಕರೆದುಕೊಂಡು ಮತ ಯಾಚಿಸುತ್ತಿದ್ದಾರೆ. ಈ ಪರಿಸ್ಥಿತಿಯಲ್ಲಿ ಜನವರಿ 21ರಂದು ತಮಿಳುನಾಡಿನ ಜನತೆ ತತ್ವಕ್ಕಾಗಿಯೂ, ಧೋರಣೆಗಾಗಿಯೂ ಅಚಲವಾಗಿ ನಿಂತಿರುವ, ಹೋರಾಡುತ್ತಿರುವ ರಂಗ ಯಾವುದೆಂಬುದನ್ನು ಗುರುತಿಸಿಕೊಂಡು ಉಳಿದ ಸಂದರ್ಭ ಸಾಧಕ ರಂಗಗಳನ್ನೆಲ್ಲಾ ತಿರಸ್ಕರಿಸಿ ತಮ್ಮ ರಾಜಕೀಯ ಪ್ರಬುದ್ಧತೆಯನ್ನು ಪ್ರದರ್ಶಿಸುವರೆಂಬುದಾಗಿ ಪ್ರಗತಿ ಪರ, ಪ್ರಜಾಸತ್ತಾತ್ಮಕ ಶಕ್ತಿಗಳು ನಿರೀಕ್ಷಿಸುತ್ತಿವೆ.

ಪಿ. ರಾಜೇಂದ್ರನ್
'ಉದಯ'

KRNW / BDS-312 MAG(2) PRB DECR 319-78-79

ತಮಿಳುನಾಡು ಚುನಾವಣಾ ನೋಟ

ತಮಿಳುನಾಡು ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದಂತೆ ಎಲ್ಲಾ ಪಕ್ಷಗಳೂ ತಮ್ಮ ಪ್ರಚಾರ ಕಾರ್ಯವನ್ನು ಬಿರುಸಾಗಿ ನಡೆಸಿವೆ. ಡಿ.ಎಂ.ಕೆ. ಮುಖಂಡರಾದ ಕರುಣಾನಿಧಿ ಹಗಲಿರುಳು ಪ್ರವಾಸದಲ್ಲಿ ನಿರತರಾಗಿ ರಾಜ್ಯಾದ್ಯಂತ ಪ್ರಚಾರ ಸಭೆಗಳನ್ನು ಉದ್ದೇಶಿಸಿ ಭಾಷಣಗಳನ್ನು ಮಾಡುತ್ತಿದ್ದಾರೆ. ಡಿ.ಎಂ.ಕೆ., ಸಿ.ಪಿ.ಐ(ಎಂ) ಜನತಾ ದಳದ ಅಭ್ಯರ್ಥಿಗಳಿಗೆ ಮತ ನೀಡುವಂತೆ ಮತದಾರರನ್ನು ಕೇಳಿಕೊಳ್ಳುತ್ತಿದ್ದಾರೆ.

ಪ. ಬಂಗಾಳದ ಮುಖ್ಯಮಂತ್ರಿ ಕಾ. ಜ್ಯೋತಿಬಸು ಕ್ಯಾಪ್ಟನ್‌ಲಕ್ಷ್ಮಿ ಮುಂತಾದವರು ಸಾಕಷ್ಟು ಕಡೆ ಸಂಚರಿಸಿ ಪ್ರಚಾರ ಸಭೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಆಂಧ್ರ ಪ್ರದೇಶದ ಮುಖ್ಯಮಂತ್ರಿ ಎನ್.ಟಿ.ರಾಮರಾವ್, ಜನತಾ ದಳದ ಅಧ್ಯಕ್ಷ ವಿ.ಪಿ.ಸಿಂಗ್ ಮುಂತಾದವರೂ ತಮಿಳುನಾಡಿನಲ್ಲೆಲ್ಲಾ ಸಂಚರಿಸಿದ್ದಾರೆ.

ಸಿ.ಪಿ.ಐ.(ಎಂ)ನ ಪ್ರಧಾನ ಕಾರ್ಯದರ್ಶಿ ಕಾ. ಇ.ಎಂ.ಎಸ್. ನಂಬೂದಿರಿಪಾದ್, ತ್ರಿಪುರಾದ ಮಾಜಿ ಮುಖ್ಯಮಂತ್ರಿ ಕಾ. ನೃಪೇನ್ ಚಕ್ರವರ್ತಿ, ಕೇರಳದ ಮುಖ್ಯಮಂತ್ರಿ ಕಾ.ಇ.ಕೆ.ನಾಯನಾರ್ ಮುಂತಾದವರು ತಮಿಳುನಾಡಿಗೆ ಆಗ ಮಿಸಿ ಚುನಾವಣಾ ಪ್ರಚಾರ ಸಭೆಗಳನ್ನು ದ್ದೇಶಿ ಭಾಷಣ ಮಾಡುತ್ತಿದ್ದಾರೆ.

ಈ ಮಧ್ಯೆ ಡಿ.ಎಂ.ಕೆ. ಸಿ.ಪಿ.ಐ.(ಎಂ) ಜನತಾದಳಕ್ಕೆ ಸೇರಿದ ಕಾರ್ಯಕರ್ತರು ತಮ್ಮ ಕ್ಷೇತ್ರದಲ್ಲಿ ಮನೆ ಮನೆಗೆ ತೆರಳಿ ಪ್ರಚಾರ ನಡೆಸುತ್ತಿದ್ದಾರೆ.

ತಿರುವರಂಬೂರು ವಿಧಾನಸಭಾ ಕ್ಷೇತ್ರದಿಂದ ಡಿ.ಎಂ.ಕೆ. ಮತ್ತು ಜನತಾ ದಳದ ಬೆಂಬಲ ಪಡೆದು ಸ್ಪರ್ಧಿಸಿರುವ ಸಿ.ಪಿ.ಐ.(ಎಂ) ಮಹಿಳಾ ಅಭ್ಯರ್ಥಿ ಕಾ. ಪಾಪಾ ಉಮಾನಾಥ್ ತೀವ್ರ ಪ್ರಚಾರ ಕಾರ್ಯ ಕೈಗೊಂಡಿದ್ದಾರೆ. ಮೂರೂ ಪಕ್ಷಗಳಿಗೆ ಸೇರಿದ ನೂರಾರು ಮಂದಿ ಕಾರ್ಯಕರ್ತರೊಡನೆ ಅಭ್ಯರ್ಥಿಯು ತಮ್ಮ ಕ್ಷೇತ್ರದ ಎಲ್ಲಾ ಪ್ರದೇಶಗಳಿಗೂ ಭೇಟಿ ನೀಡುತ್ತಿದ್ದಾರೆ.

ಹಲವಾರು ಪ್ರದೇಶಗಳಲ್ಲಿ ಮಹಿಳೆಯರು ತಮ್ಮ ಮನೆಗಳ ಮುಂದೆ ಬಣ್ಣಬಣ್ಣದ ರಂಗವಲ್ಲಿಗಳನ್ನು ಬರೆದು ಅಭ್ಯರ್ಥಿಯನ್ನು ಆರತಿ ಬೆಳಗಿ ಸ್ವಾಗತಿಸುತ್ತಿದ್ದಾರೆ. ಮಹಿಳಾ ಹಕ್ಕುಗಳಿಗಾಗಿ ಹೋರಾಡುತ್ತಿರುವ ನಿಮ್ಮನ್ನು ನಾವು ಗೆಲ್ಲಿಸುತ್ತೇವೆಂದು ಘೋಷಿಸುತ್ತಿದ್ದಾರೆ. ಹಲವು ಕಡೆ ಅಭ್ಯರ್ಥಿಗೆ ನೋಟಿನ ಹಾರವನ್ನು ಅರ್ಪಿಸಲಾಗುತ್ತಿದೆ. ಗ್ರಾಮಾಂತರ ಪ್ರದೇಶಗಳಿಗೆ ಅಭ್ಯರ್ಥಿ ಭೇಟಿ ನೀಡಿದಾಗ ಅಲ್ಲಿನ ಗ್ರಾಮಸ್ಥರು ತಮ್ಮ ಕುಂದು ಕೊರತೆಗಳನ್ನು ಚರ್ಚಿಸಿದರು. ನೀರಿಲ್ಲದೆ ಪೈರುಗಳು ಒಣಗುತ್ತಿರುವುದನ್ನು ಅಭ್ಯರ್ಥಿಯ ಗಮನಕ್ಕೆ ತಂದೊಡನೆ ಅಭ್ಯರ್ಥಿ ಕಾ. ಪಾಪಾ ಉಮಾನಾಥ್ ಅವರು ರಾಜ್ಯಪಾಲ ಅಲೆಕ್ಸಾಂಡರ್ ಅವರಿಗೆ ಟೆಲಿಗ್ರಾಂ ಕಳಿಸಿ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ ಅಲ್ಲದೆ ಸ್ಥಳೀಯ ಎಂಜಿನಿಯರೊಂದಿಗೆ ಮುಖತಃ ಚರ್ಚಿಸಿದರು. ಇದರ ಪರಿಣಾಮವಾಗಿ ಕಾಲುವೆಗೆ ನೀರು ಬಂದು ರೈತರ ಸಮಸ್ಯೆ ಬಗೆಹರಿದಿದೆ.

ತೊಂಡ ಮೂತೂರು ಕ್ಷೇತ್ರದಿಂದ ಸ್ಪರ್ಧಿಸುತ್ತಿರುವ ಸಿ.ಪಿ.ಐ.(ಎಂ) ಅಭ್ಯರ್ಥಿ ಕಾ. ವೆಳ್ಳಿಂಗಿರಿ ಅವರಿಗೆ ಹೆಚ್ಚು ಹೆಚ್ಚು ಮತದಾರರು ಬೆಂಬಲಿಸುತ್ತಿದ್ದಾರೆ. ಕ್ಷೇತ್ರದ ಎಲ್ಲ ಕಡೆಗಳಲ್ಲೂ ಅವರನ್ನು ವಾದ್ಯ ಮೇಳದೊಂದಿಗೆ ಮತದಾರರು ಸ್ವಾಗತಿಸುತ್ತಿದ್ದಾರೆ. ಕ್ಷೇತ್ರದ ಎಲ್ಲಾ ಕಡೆಗಳಲ್ಲೂ ಜನರು ತಮ್ಮ ಕುಂದು ಕೊರತೆಗಳನ್ನು ವಿವರಿಸಿ ಇಲ್ಲಿಂದ ಓಟು ಪಡೆದು ಗೆದ್ದ ಅಭ್ಯರ್ಥಿಗಳು ಈ ಬಗ್ಗೆ ಗಮನ ನೀಡದ ಬಗ್ಗೆ ತಮ್ಮ ತೀವ್ರ ಅತೃಪ್ತಿಯನ್ನು ವ್ಯಕ್ತಪಡಿಸುತ್ತಿದ್ದಾರೆ.

ಕೈಗಾರಿಕಾ ನಗರವಾದ ಕೊಯಮತ್ತೂರು ಕ್ಷೇತ್ರದಿಂದ ತಮಿಳುನಾಡಿನ ಜನಪ್ರಿಯ ಕಾರ್ಮಿಕ ಮುಖಂಡರಾದ ಕಾ. ಕೆ. ರಮಣಿ ಸಿ.ಪಿ.ಐ.(ಎಂ) ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದಾರೆ. ಅವರು ಸಮರ ದೋಪಾದಿಯಲ್ಲಿ ಪ್ರಚಾರ ಕಾರ್ಯ ಆರಂಭಿಸಿದ್ದಾರೆ. ಅವರಿಗೆ ಎಲ್ಲೆಲ್ಲೂ ಉತ್ಸಾಹದ ಸ್ವಾಗತ ದೊರೆಯುತ್ತಿದೆ. ಡಿ.ಎಂ.ಕೆ., ಜನತಾದಳದ ಕಾರ್ಯಕರ್ತರುಗಳು ಕೂಡ ಹುರುಪಿನಿಂದ ಹಗಲಿರುಳು ಸಿ.ಪಿ.ಐ.(ಎಂ) ಅಭ್ಯರ್ಥಿಯ ಗೆಲುವಿಗೆ ಶ್ರಮಿಸುತ್ತಿದ್ದಾರೆ.

ಹೆಚ್ಚು ಕಡಿಮೆ ಸಿ.ಪಿ.ಐ.(ಎಂ) ಅಭ್ಯರ್ಥಿಗಳು ಸ್ಪರ್ಧಿಸುತ್ತಿರುವ 21 ಕ್ಷೇತ್ರಗಳಲ್ಲೂ ಚುನಾವಣಾ ಪ್ರಚಾರ ಕಾರ್ಯ ಭರದಿಂದ ಸಾಗುತ್ತಿದೆ. ★

ತಮಿಳುನಾಡು ವಿಧಾನಸಭಾ ಚುನಾವಣೆ ಒಂದು ರಾಷ್ಟ್ರೀಯ ಮಹತ್ವ ಪಡೆದಿದೆ. ಇದರಲ್ಲಿ ಕರ್ನಾಟಕದ ನಮ್ಮ ಪಕ್ಷವೂ ತನ್ನ ಅಳಿಲ ಸೇವೆ ಸಲ್ಲಿಸುತ್ತಿದೆ. ಕರ್ನಾಟಕ ರಾಜ್ಯ ಸಮಿತಿ 5000 ರೂ. ಚುನಾವಣಾ ನಿಧಿಗೆ ಕೊಟ್ಟಿರುವುದಲ್ಲದೆ ಕಾಂ. ಪಿ.ಕೆ.ಸುಬ್ರಮಣಿ, ಕಾಂ. ವಿನ್ಸೆಂಟ್ ಹಾಗೂ ಕಾ. ಟಿ.ಎಸ್.ಮಣಿ ನೇತೃತ್ವದಲ್ಲಿ ಒಟ್ಟು ನೂರಕ್ಕೂ ಹೆಚ್ಚು ನಮ್ಮ ರಾಜ್ಯದ ಸಂಗಾತಿಗಳು ಗುಡಿಯಾಟ್ಟಂ ಕ್ಷೇತ್ರದಲ್ಲಿ ಪ್ರಚಾರ ಕಾರ್ಯದಲ್ಲಿ ತೊಡಗಿದ್ದಾರೆ.

ಕೇರಳ ಸಿ.ಪಿ.ಐ(ಎಂ) ನಿರ್ಧಾರ

ಪುಟ 1 ರಿಂದ

ಹೆಸರುಗಳಲ್ಲಿ ಐದನ್ನು ಮಾತ್ರ ಆರಿಸಿ ಬಹುಪಾಲು ಹೆಸರುಗಳನ್ನು ನಿರ್ಲಕ್ಷಿಸಿ ತನಗೆ ಬೇಕೆನಿಸಿದವರ ಹೆಸರುಗಳನ್ನು ಹಾಕಿರುವುದು. ವಿಶ್ವವಿದ್ಯಾನಿಲಯಗಳು ಸೂಚಿಸಿದ ವಿದ್ಯಾರ್ಥಿಗಳ ಹೆಸರುಗಳನ್ನು ತಿರಸ್ಕರಿಸಿ ಆಟಗಾರರ ಕೋಟಾದಲ್ಲಿ ಅನರ್ಹರಾಗಿದ್ದ ಕಾಂಗ್ರೆಸ್(ಐ)ನ ವಿದ್ಯಾರ್ಥಿಗಳನ್ನು ಆಕೆ ಸೆನೇಟ್‌ಗೆ ನೇಮಿಸಿದ್ದಾರೆ. ಇಂತಹ ನೇಮಕ ಇದುವರೆಗೆ ಬೇರೆಲ್ಲೂ ನಡೆದಿಲ್ಲ.

ಕಳೆದ ಮಾರ್ಚ್ 15 ರ ಭಾರತ್ ಬಂದ್‌ನಂದು ಕೇರಳದಲ್ಲಿ ಎಲ್.ಡಿ.ಎಫ್. ಬಂದ್ ಆಚರಿಸುತ್ತಿದ್ದಾಗ, ರಾಜ್ಯದಲ್ಲಿ ಕಾನೂನು ವ್ಯವಸ್ಥೆಯ ಪರಿಸ್ಥಿತಿ ಎಂದಿನಂತೆಯೇ ಇದ್ದರೂ ಆಕೆ ಕಾನೂನು ವ್ಯವಸ್ಥೆ ಪಾಲಿಸಲು ಪೊಲೀಸರಿಗೆ ಸೂಕ್ತ ನಿರ್ದೇಶನವನ್ನು ರಾಜ್ಯ ಸರ್ಕಾರ ನೀಡಬೇಕೆಂದು ಅನಗತ್ಯವಾದ, ಅಧಿಕ ಪ್ರಸಂಗತನದ ಪತ್ರಿಕಾ ಹೇಳಿಕೆ ನೀಡಿದ್ದನ್ನು ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳು ಮಾತ್ರವಲ್ಲ ಸಂವಿಧಾನ ತಜ್ಞರೂ ಖಂಡಿಸಿದ್ದರು.

ಯಾವುದೇ ಸುಗ್ರೀವಾಜ್ಞೆ ರಾಜ್ಯ ವಿಧಾನ ಸಭೆಯ ಅಧಿಕಾರ ವ್ಯಾಪ್ತಿಯೊಳಗಿದ್ದರೆ ಮಂತ್ರಿಮಂಡಲ ಅಂಗೀಕಾರ ನೀಡಿದ ಯಾವುದೇ ಸುಗ್ರೀವಾಜ್ಞೆಯನ್ನು ರಾಜ್ಯಪಾಲರು ಜಾರಿಗೊಳಿಸಬೇಕು. ಆದರೆ ರಾಮ್‌ದುಲಾರಿಸಿನ್ಹಾರವರಿಗೆ ಅದರ ಪರಿವೆಯೇ ಇಲ್ಲ. ರಾಜ್ಯ ಮಂತ್ರಿ ಮಂಡಲ ಅಂಗೀಕಾರ ನೀಡಿದ ಕೋಝಿಕೋಡ್ ವಿಶ್ವವಿದ್ಯಾನಿಲಯ ತಿದ್ದುಪಡಿ ಸುಗ್ರೀವಾಜ್ಞೆಗೆ ಇನ್ನೂ ಆಕೆ ಒಪ್ಪಿಗೆ ನೀಡಿಲ್ಲ.

ಹೀಗೆ ಅವರು ಕಾಂಗ್ರೆಸ್(ಐ)ನ ಏಜೆಂಟರಂತೆ ವರ್ತಿಸಲು ಕಾರಣ ರಾಜೀವ್‌ಗಾಂಧಿ ಸರ್ಕಾರದ ಹೆಚ್ಚುತ್ತಿರುವ ಸರ್ವಾಧಿಕಾರೀ ಪ್ರವೃತ್ತಿಯೇ. ರಾಜ್ಯಪಾಲ-ರಾಜ್ಯಸರ್ಕಾರಗಳ ಸಂಬಂಧ ಕೇಂದ್ರ-ರಾಜ್ಯ ಸಂಬಂಧಗಳ ಒಂದು ಅಂಗ. ಸರ್ಕಾರಿಯಾ ಆಯೋಗ ಕೇಂದ್ರದ ಆಳುವ ಪಕ್ಷದ ಸಕ್ರಿಯ ರಾಜಕಾರಣಿಗಳನ್ನು ರಾಜ್ಯಪಾಲರಾಗಿ ನೇಮಿಸಬಾರದು ಎಂದು ಸಲಹೆ ನೀಡಿದೆ. ಅಷ್ಟೇ ಅಲ್ಲ, ಸಂವಿಧಾನ ಸಭೆಯಲ್ಲಿ ನೆಹರೂ ಕೂಡಾ ಇದೇ ಅಭಿಪ್ರಾಯ ವ್ಯಕ್ತಪಡಿಸುತ್ತಾ ರಾಜ್ಯ ಸರ್ಕಾರಗಳಿಗೆ ಒಪ್ಪಿಗೆಯಾದ, ರಾಜಕೀಯದಲ್ಲಿ ಮುಳುಗಿರದ ಪ್ರಸಿದ್ಧ ವ್ಯಕ್ತಿಗಳನ್ನು ನೇಮಿಸುವ ಪದ್ಧತಿ ಒಳ್ಳೆಯದೆಂದು ವಾದಿಸಿದ್ದರು. ಆದರೂ ತನ್ನ ಆಕಾಂಕ್ಷೆಯನ್ನು ಹೇಗಾದರೂ ಉಳಿಸಿಕೊಳ್ಳಲು ಸರ್ವಾಧಿಕಾರೀ ಪ್ರವೃತ್ತಿಯನ್ನೂ ಹೆಚ್ಚೆಚ್ಚಾಗಿ ತೋರುತ್ತಿರುವ ಈಗಿನ ಕಾಂಗ್ರೆಸ್(ಐ) ಮುಖಂಡರು ಈ ಸಲಹೆಯನ್ನು ಬದಿಗೆ ತಳ್ಳಿದ್ದಾರೆ.

ರಾಮ್‌ದುಲಾರಿ ಸಿನ್ಹಾರವರ ನಡವಳಿಕೆ ಸಂಸದೀಯ ಪ್ರಜಾಪ್ರಭುತ್ವಕ್ಕೆ ಬೆದರಿಕೆಯೊಡ್ಡಿದೆಯೆಂದು ಕೇರಳ ರಾಜ್ಯ ಸಮಿತಿ ಅಂಗೀಕರಿಸಿದ ನಿರ್ಣಯ ಹೇಳಿದೆ.

ಹೋರಾಟದ ಆರಂಭ

ಪುಟ 1 ರಿಂದ

ಜೆಗೆ ವಿ.ಪಿ.ಸಿಂಗ್ ರಾಷ್ಟ್ರೀಯರಂಗ ವಿದೇಶಾಂಗ ಧೋರಣೆಯನ್ನು ರೂಪಿಸುತ್ತದೆ ಎಂದು ಹೇಳಿರುವುದು ಈ ಹಿನ್ನೆಲೆಯಲ್ಲಿ ಸ್ವಾಗತಾರ್ಹ ಎಂದು ಇ.ಎಂ.ಎಸ್. ಹೇಳಿದರು.

ಕಮ್ಯೂನಿಸ್ಟರು ಸದಾ ಆರೆ-ಫ್ಯಾಸಿಸ್ಟ್ ಹಿಂದೂ ಕೋಮುವಾದಿ ಸಂಘಟನೆಗಳಿಂದ ಮುಸ್ಲಿಮರ ರಕ್ಷಣೆಗೆ ನಿಂತಿದೆ ಎಂದ ಇ.ಎಂ.ಎಸ್. ಪ್ರತ್ಯೇಕತಾವಾದಿ ಭಾವನೆ ಹರಡುವ ಪಕ್ಷಗಳತ್ತ ಮುಖ ಮಾಡದೆ ದೇಶಪ್ರೇಮಿ ಶಕ್ತಿಗಳೊಡನೆ ಸೇರಿಕೊಳ್ಳಬೇಕೆಂದು ಮುಸ್ಲಿಂ ಜನತೆಗೆ ಮನವಿ ಮಾಡಿಕೊಳ್ಳುತ್ತಾ ಚುನಾವಣೆಗಳು ಬರುತ್ತವೆ, ಹೋಗುತ್ತವೆ. ಆದರೆ ಕೋಮು ಭಾವೋದ್ರೇಕ ಎಬ್ಬಿಸಿದರೆ ಅದರ ದುಷ್ಪರಿಣಾಮ ಸದಾ ಕುಟುಕುತ್ತಿರುತ್ತವೆ ಎಂದು ಎಚ್ಚರಿಸಿದರು. ವಿಚ್ಛಿದ್ರಕಾರಿ, ಕೋಮು ಶಕ್ತಿಗಳ ವಿರುದ್ಧ ವಿಶೇಷವಾಗಿ ಬಹು ಸಂಖ್ಯಾತ ಕೋಮುವಾದದ ವಿರುದ್ಧ ದೃಢ ನಿಲುವು ತಳೆಯುವ ಅಗತ್ಯವನ್ನು ರಾಷ್ಟ್ರೀಯರಂಗ ಮನಗಾಣಬೇಕೆಂದು ಅವರು ಹೇಳಿದರು.

ಜನವರಿ 21ರ ತಮಿಳುನಾಡು ಚುನಾವಣೆಗಳು ರಾಜೀವ್‌ಗಾಂಧಿ ಸರ್ಕಾರವನ್ನು ಅಧಿಕಾರದಿಂದಿಳಿಸುವ ಒಂದು ದೊಡ್ಡ ಅಖಿಲ ಭಾರತೀಯ ಸಮರದ ಆರಂಭ. ರಾಷ್ಟ್ರೀಯರಂಗ ಮುಂಬರುವ ದಿನಗಳಲ್ಲಿ ತನ್ನನ್ನು ಬಲ ಗೊಳಿಸುತ್ತದೆ ಕೇಂದ್ರದಲ್ಲೂ ಒಂದು ಹೊಸ ಸರ್ಕಾರ ಸ್ಥಾಪನೆಯಾಗುತ್ತದೆ. ಡಿ.ಎಂ.ಕೆ ಅದರ ಒಂದು ಅಂಗವಾಗಿರುತ್ತದೆ ಎಂದು ಮಧುರೈನಲ್ಲಿ ಜನವರಿ 17ರಂದು ಚುನಾವಣಾ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಇ.ಎಂ.ಎಸ್. ಹೇಳಿದರು.

ಯೂನಿಯನ್ ಕಾರ್ಬೈಡ್ ವಿರುದ್ಧ
ಅಮೆರಿಕನ್ ಅಧ್ಯಕ್ಷರಿಗೆ ಕವಿಗಳ ಮನವಿ

"ಅಮೆರಿಕಾದಲ್ಲಿ ಹಲವು ರೀತಿಯಲ್ಲಿ ರಾಸಾಯನಿಕ ಯುದ್ಧ ಸಂಶೋಧನೆಯೊಡನೆ ಸಂಬಂಧ ಹೊಂದಿರುವ ಯೂನಿಯನ್ ಕಾರ್ಬೈಡ್ ಕಾರ್ಪೊರೇಷನ್ ಭೋಪಾಲದ ಅನಿಲ ಸೋರಿಕೆಯ ಪರಿಣಾಮಗಳ ಬಗ್ಗೆ ಮಾಹಿತಿ ಕಲೆ ಹಾಕುವಲ್ಲಿಯೇ ಹೆಚ್ಚು ಆಸಕ್ತವಾಗಿದೆಯೇ ಹೊರತು ದುರಂತಕ್ಕೆ ತುತ್ತಾದವರ ಬಗ್ಗೆ ತನ್ನ ನೈತಿಕ, ಮಾನವೀಯ ಹಾಗೂ ಕಾನೂನಾತ್ಮಕ ಹೊಣೆಯ ಬಗ್ಗೆ ಯಾವ ಲಕ್ಷ್ಯವನ್ನೂ ಹರಿಸುತ್ತಿಲ್ಲ" ಎಂದು ಆರು ಖಂಡಗಳ 23 ಕವಿಗಳು ಅಮೆರಿಕಾದ ಅಧ್ಯಕ್ಷರಿಗೆ ಅರ್ಪಿಸಲಿರುವ ಮನವಿಯೊಂದರಲ್ಲಿ ಹೇಳಿದ್ದಾರೆ.

ಅಮೆರಿಕನ್ ಭಾರತೀಯ ನ್ಯಾಯಾಲಯಗಳಲ್ಲಿ ಇತ್ತಿರುವ ತೀರ್ಪುಗಳನ್ನು ಜಾರಿಗೊಳಿಸುವ ಬಗ್ಗೆ ಗಮನವೇ ಹರಿಸಲಿಕ್ಕಿಲ್ಲ ಎಂಬ ಭರವಸೆ ಯೂನಿಯನ್ ಕಾರ್ಬೈಡ್‌ಗಿರುವುದರಿಂದ ಅದು ಈಬಗ್ಗೆ ನಿಶ್ಚಿಂತವಾಗಿರಲು ಸಾಧ್ಯವಾಗಿದೆ. ಆದ್ದರಿಂದ ಈ ಕಂಪೆನಿಯ ಜಾಗತಿಕ ಆಸ್ತಿಯ ಬಗ್ಗೆ ಭಾರತೀಯ ನ್ಯಾಯಾಲಯಗಳು ಇತ್ತಿರುವ ನಿರ್ಣಯಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮಾಡಬೇಕೆಂದು ಈ ಕವಿಗಳು ಅಮೆರಿಕನ್ ಅಧ್ಯಕ್ಷರನ್ನು ಕೇಳಿಕೊಂಡಿದ್ದಾರೆ. ಅಲ್ಲದೆ ಈ ಕಂಪೆನಿಯ 20ಕೋಟಿ ಡಾಲರ್ ವಿಮಾಹಣವನ್ನು ದುರಂತಕ್ಕೆ ತುತ್ತಾದವರಿಗಾಗಿ ಬಿಡುಗಡೆ ಮಾಡಬೇಕೆಂದು ಅವರು ಒತ್ತಾಯಿಸಿದ್ದಾರೆ. ಭೋಪಾಲದ ಸ್ಥಾವರವನ್ನು ಬಿಟ್ಟು, ಅಮೆರಿಕಾದಲ್ಲಿ ಅದರ ವಿಮೆ ಇಳಿಸಿರುವ ಯೂನಿಯನ್ ಕಾರ್ಬೈಡ್ ಉದ್ದೇಶ ಪೂರ್ವಕವಾಗಿಯೇ ಈ ಕೀಟನಾಶಕ ತಯಾರಿಸುವ ಸ್ಥಾವರದಲ್ಲಿನ ವಿಷಕಾರೀ ಸಾಮಗ್ರಿಗಳ ಬಗ್ಗೆ ಮಾಹಿತಿ ನೀಡುತ್ತಿಲ್ಲ. ಆದ ರಿಂದ ಭೂಪಾಲದಲ್ಲಿ ಜನ ಇನ್ನೂ ಸಾಯುತ್ತಲೇ ಇದಾರೆ ಎಂದು ಆಪಾದಿಸಿರುವ ಈ ಕವಿಗಳು ದುರಂತ ಕ್ಕೀಡಾದವರ ಶುಶ್ರೂಷೆಗೆ ಅಗತ್ಯವಾದ ಎಲ್ಲಾ ಮಾಹಿತಿಗಳನ್ನು ಈ ಕಂಪೆನಿ ನೀಡುವಂತೆ ಒತ್ತಾಯಿಸಬೇಕೆಂದು ಅಮೆರಿಕನ್ ಅಧ್ಯಕ್ಷರಲ್ಲಿ ಕೇಳಿಕೊಂಡಿ

"ನೀವು ಈ ಎಲ್ಲಾ ವಿಷಯಗಳ ಬಗ್ಗೆ ಗಂಭೀರವಾಗಿ ಯೋಚಿಸಿ ನ್ಯಾಯ, ಸತ್ಯ ಮತ್ತು ಮಾನವೀಯತೆಯ ಪರವಾಗಿ ನಿಮ್ಮ ಪೂರ್ವಜರಾದ ಜಾರ್ಜ್ ವಾಷಿಂಗ್ಟನ್ ಮತ್ತು ಅಬ್ರಹಾಂಲಿಂಕನ್ ಹಾಕಿಕೊಟ್ಟ ಮೌಲ್ಯಗಳನ್ನು ಎತ್ತಿ ಹಿಡಿಯುತ್ತೀರೆಂದು ನಾವು ನಿರೀಕ್ಷಿಸುತ್ತೇವೆ" ಎಂದು ತಮ್ಮ ಮನವಿಯಲ್ಲಿ ಹೇಳಿರುವ ಈ 23 ಕವಿಗಳು ವಿಶ್ವ ಕವನ ಉತ್ಸವದಲ್ಲಿ ಭಾಗವಹಿಸಲು ಭೂಪಾಲಕ್ಕೆ ಬಂದಿದ್ದಾರೆ.

ಹಣಕಾಸು ಆಯೋಗಕ್ಕೆ

ದೇಶದ 23 ರಾಜ್ಯಗಳಲ್ಲಿ 11 ರಾಜ್ಯಗಳಲ್ಲಿ ಕಾಂಗ್ರೆಸ್(ಐ)ಯೇತರ ಸರ್ಕಾರಗಳನ್ನು ಜನತೆ ಚುನಾಯಿಸಿದೆ.

ಕೋಮುವಾದಿ, ಪ್ರಾದೇಶಿಕತಾವಾದಿ, ಭಾಷಿಕ, ಉನ್ಮಾದವಾದಿ, ಪ್ರತ್ಯೇಕತಾವಾದಿ ಮುಂತಾದ ವಿಚ್ಛಿದ್ರಕಾರಿ ಶಕ್ತಿಗಳು ಭಾರತದ ಐಕ್ಯತೆ ಮತ್ತು ಸಮಗ್ರತೆಗೆ ಸವಾಲು ಹಾಕಿದೆ.

ಈ ಹಿನ್ನೆಲೆಯಲ್ಲಿ ಸಿ.ಪಿ.ಐ.(ಎಂ) ಬಲಶಾಲಿ ಕೇಂದ್ರ ಮತ್ತು ಬಲಶಾಲಿ ರಾಜ್ಯಗಳನ್ನು ಬಯಸುತ್ತದೆ.

3.ಕರ್ನಾಟಕ ಬರಪೀಡಿತ ಪ್ರದೇಶ. ಕಳೆದ 4-5 ವರ್ಷಗಳಿಂದ ಸತತವಾಗಿ ಬರದಿಂದ ತತ್ತರಿಸಿದೆ. ಈ ಅವಧಿಯಲ್ಲಿ 1982-83ರಿಂದ 1987-88ರವರೆಗೆ ಬರ ಪರಿಹಾರಕ್ಕಾಗಿ ಕರ್ನಾಟಕ ಸರ್ಕಾರ 780 ಕೋಟಿ ರೂ.ಗಳನ್ನು ಖರ್ಚು ಮಾಡಬೇಕಾಯಿತು. ಬರಪರಿಹಾರಕ್ಕೆ ಕೇಂದ್ರ ಸರ್ಕಾರ ಕೊಟ್ಟ ಹಣವನ್ನು ಯೋಜನಾ ವೆಚ್ಚಕ್ಕೆ ಕೊಟ್ಟ ಮುಂಗಡ ಸಾಲವಾಗಿ ಪರಿಗಣಿಸುವ ಪದ್ಧತಿ ನಿಲ್ಲಬೇಕು. ಇದನ್ನು ಅನುದಾನವಾಗಿ ಪರಿಗಣಿಸಬೇಕು- ಇದರಿಂದ ರಾಜ್ಯ ಸರ್ಕಾರಗಳ ಆರ್ಥಿಕ ಭಾರ ಹೆಚ್ಚಿಸುವುದು ಮತ್ತು ಏರಿಸಿದ ಬೆಲೆಗಳಿಂದ ಬರುವ ರೆವಿನ್ಯೂ ಹಣದ ರಾಜ್ಯ ಸರ್ಕಾರಗಳ ನ್ಯಾಯವಾದ ಪಾಲು ಕೊಡದೆ ಮೋಸ ಮಾಡುವುದನ್ನು ನಿಲ್ಲಿಸಬೇಕು. ಈ ಬೆಲೆ ಏರಿಕೆಗಳನ್ನು ಎಕ್ಸೈಜ್ ಸುಂಕವೆಂದು ಪರಿಗಣಿಸಿ ಅದರಲ್ಲಿ ರಾಜ್ಯಗಳ ನ್ಯಾಯಯುತ ಪಾಲು ಕೊಡಬೇಕು.

6. 1959-60ರಿಂದ ಕಂಪೆನಿಗಳು ಕೊಡುವ ಆದಾಯ ತೆರಿಗೆಯನ್ನು ನೆರೆಪೀಡಿತ ರಾಜ್ಯಗಳಿಗೆ ಮಾಡುವ ಹಾಗೆ.

4. ಪ್ರಸ್ತುತ ವಿಶ್ವ ಬ್ಯಾಂಕ್ ಸಾಲವಾಗಿ ಕೊಡುವ ಹಣದ ಶೇ. 70 ಭಾಗ ಮಾತ್ರ ರಾಜ್ಯಗಳಿಗೆ ಕೊಡುವ ಪದ್ಧತಿ ನಿಲ್ಲಬೇಕು. ರಾಜ್ಯಗಳಿಂದ ವಸೂಲಿ ಮಾಡುವ ಬಡ್ಡಿದರ ಸಹ ವಿಶ್ವಬ್ಯಾಂಕ್ ತೆಗೆದುಕೊಳ್ಳುವಷ್ಟೇ ಇರಬೇಕು.

5 ಪ್ರತಿಯೊಂದು ಕೇಂದ್ರ ಬಜೆಟ್‌ನ ಮೊದಲು ಉಪ್ಪು, ಇದ್ದಿಲು ಮುಂತಾದ ಸರಕುಗಳ ಆಡಳಿತಾತ್ಮಕ ದರಗಳನ್ನು ಏರಿಸುವ ಕೆಟ್ಟ ಪದ್ಧತಿ ನಿಲ್ಲಬೇಕು ಕೇಂದ್ರ-ರಾಜ್ಯಗಳ ನಡುವೆ ಹಂಚುವ ರಾಶಿಯಿಂದ ಪ್ರತ್ಯೇಕಿಸಲಾಗಿದೆ. ಆ ಮೂಲಕ ರಾಜ್ಯಗಳನ್ನು ಬೆಳೆಯುವ ಆದಾಯ ಮೂಲಗಳಿಂದ ವಂಚಿತವಾಗಿಸಲಾಗಿದೆ. ಇದು ನಿಲ್ಲಬೇಕು.

7. ಆದಾಯ ತೆರಿಗೆ ಮೇಲೆ ಅಧಿಕ ತೆರಿಗೆಯನ್ನು ವಿಧಿಸುವ ಮೂಲಕ, ಆದಾಯ ತೆರಿಗೆಯಲ್ಲಿ ರಾಜ್ಯಗಳಿಗೆ ಕೊಡಬೇಕಾದ ಪಾಲು ಹಂಚಿಕೊಳ್ಳುವುದನ್ನು ತಪ್ಪಿಸಲು ಪ್ರಯತ್ನಿಸಲಾಗುತ್ತಿದೆ. ಇದರ ಬದಲು ಆದಾಯ ತೆರಿಗೆಯ ದರ ಹೆಚ್ಚಿಸಿ. ಈ ಹೆಚ್ಚಳದಲ್ಲಿ ರಾಜ್ಯಗಳ ಪಾಲು ನೀಡಬೇಕು.

8. ಕರ್ನಾಟಕದಲ್ಲಿ ನೀರಾವರಿಯ ವ್ಯಾಪ್ತಿ ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇದೆ. ಆದ್ದರಿಂದ ಕರ್ನಾಟಕದ ನೀರಾವರಿ ಯೋಜನೆಗಳಿಗೆ ವಿಶೇಷ ಗಮನ ಕೊಡಬೇಕು.

ಈ ಮೇಲಿನ ಬೇಡಿಕೆಗಳನ್ನು ಮನ್ನಿಸದಿದ್ದರೆ, ಕರ್ನಾಟಕದ ಅವಶ್ಯಕತೆಗಳನ್ನು ನಿರ್ಲಕ್ಷಿಸುವುದು ಮುಂದುವರಿದರೆ-ಇದು ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಗೆ ಭಂಗ ತಂದೀತು ಎಂದು ಮನವಿಯಲ್ಲಿ ಕಮೀಷನ್‌ನ್ನು ಎಚ್ಚರಿಸಲಾಗಿದೆ. ★

Printed & Published by P.Ramachandra Rao on behalf of Communist Party of India (Marxist) Karnataka State Committee, K.V.Temple Street, Sulthanpet, Bangalore-560053 . Managing Editor: N.K.Upadhyaya Managenial Office: Shobha Lodge Complex, 5th Main Road, Gandhinagar, Bangalore. 560 009.